No M

॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥

ಬಿಡಿ ಪ್ರತಿ 3 ಪೈ

ಸತ್ಯವಾದಿ

ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯ
ರಿಂದ 1917 ರಲ್ಲಿ ಪ್ರತಿಷ್ಠಿತವಾದುದು

ಪ್ರತಿ ಬುಧವಾರ

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 0—12—0
ಪರಸ್ಥಳಕ್ಕೆ 1—10—0

ಸಂಪುಟ 21]
23—2—1938
[ಸಂಚಿಕೆ 25

ಗಂಡನು ಹೆಂಡತಿ ವೇಷತಾಳಿದ

ಪ್ಯಾರಿಸ್ಸಿನ ಪೋಲೀಸಿನವರು ಒಂದು ಕೇಸನ್ನು ಹುಡುಕುತ್ತಲಿರುವರು. ಅದರಲ್ಲಿ ಗಂಡನು ಹೆಂಡತಿಯ ವೇಷವನ್ನು ತಾಳಿದ್ದ, ಪಾಪ! ಇನ್ನಾವುದಕ್ಕೂ ಅಲ್ಲ. ಅವಳು ಪರೀಕ್ಷೆಯಲ್ಲಿ ತೇರ್ಗಡೆಯಾಗಲೆಂಬುದೇ ಅವನ ಅಂತರ್ಯ. ಗಂಡನು ಗೌರ್ನಮೆಂಟು ಗುಮಾಸ್ತ. ಹೆಂಡತಿಯು ವೈದ್ಯ ಪರೀಕ್ಷೆಗೆ ಹೋಗಬೇಕೆಂತಲೂ ಇವನು ಪರೀಕ್ಷೆಗೆ ಕೂರಬೇಕೆಂತಲೂ ಮಾತನಾಡಿಕೊಂಡರು. ಗಂಡನು (ಕೃತಕ ಹೆಂಡತಿ ವೇಷದಲ್ಲಿ) ಪರೀಕ್ಷಾ ಕ್ಷೇತ್ರಕ್ಕೆ ಸೇರಿದನು. ಆದರೆ ಇವನ ಹೆಂಡತಿಯನ್ನು ನೋಡಿದ ವೈದ್ಯನು ಇದ್ದನು. ವೈದ್ಯನಿಗೆ ಸಂಶಯಹುಟ್ಟಿತು. ಸರಿ ಪೀಕಲಾಟಬಂತು.

ಗಂಡಹೆಂಡರ ಜಗಳ ಮಧ್ಯಸ್ಥಗಾರನು ಹೆಂಡತಿಯನ್ನು ಹಾರಿಸಲು ಪ್ರಯತ್ನ !

ಲಾಸ್ ಏಂಜಲೀಸ್‌ನಲ್ಲಿ ಗಂಡಹೆಂಡರಲ್ಲಿ ಜಗಳ. ಹೆಂಡತಿಗೆ ಗಂಡನಲ್ಲಿ ಸ್ವಲ್ಪ ಅನುಮಾನಬಂತು. ಇವರಿಬ್ಬರ ಜಗಳವನ್ನು ಸರಿಪಡಿಸುವುದಕ್ಕೆ ಸ್ನೇಹಿತ ಬಂದನು. ಹೆಂಡತಿಗೆ ಏನೇನೋ ಸಮಾಧಾನ ಹೇಳಿದನು. ಪಾಪ! ಗಂಡನು ಶಾಂತನಾಗಿ ಹೊರಗೆ ಹೋಗಿ ಬರುವಷ್ಟರಲ್ಲೇ, ಹೆಂಡತಿಯು ಸ್ನೇಹಿತನೊಂದಿಗೆ ಪ್ರಣಯ ಲೀಲೆಯನ್ನು ಆರಂಭಿಸಿದ್ದಳು. !!

ಹರ್ ಹಿಟ್ಲರ್ ಅಭಿಮತ

ಜಪಾನು ಬಲಯುತವಾಗಲೆಂದೇ ತನ್ನ ಆಶೆಯೆಂದು ತಿಳಿಯಪಡಿಸಿದ್ದಾರೆ.

ಇಂಡಿಯಾನಾದಲ್ಲಿ ಮದುವೆ ಮಾಡಿಕೊಳ್ಳುವುದು ಕಷ್ಟ

ಅಮೇರಿಕದ ಇಂಡಿಯಾನಾದಲ್ಲಿ ಇಲ್ಲಿಯವರಿಗೆ ಮದುವೆಗಳು ಸರಾಗವಾಗಿ ಜರುಗುತ್ತಿದ್ದವು. ಮದುವೆಗಳಾಗುತ್ತಲಿರುವ ಗಂಡಹೆಂಡಿರು ವೈದ್ಯ ಪರೀಕ್ಷೆಗೆ ಗುರಿಯಾಗಬೇಕಾದ್ದಿಲ್ಲ. ಆದರೆ ಅಕ್ಕಪಕ್ಕದಲ್ಲಿರುವ ಪ್ರದೇಶದ ಸಂಸ್ಥಾನಗಳು ಈ ಪರೀಕ್ಷೆಗೆ ಒತ್ತಾಯ. ಸರಿ ಅದೇ ಗಾಳಿ ಇದಕ್ಕೂ ಬೀಸಿತು. ಇದು ಈಗ ಕಾನೂನು ಆಗಿಬಿಟ್ಟಿದೆ. ಒಳ್ಳೆಯದೇ ಬಿಡಿ. ಮಕ್ಕಳು ಹುಟ್ಟಿದರೇ ಬಲವಾದವರೇ ಹುಟ್ಟುವರು.

ಬ್ರಿಟನ್ನಿನಲ್ಲಿ ಗಡಬಿಡಿ

ಮುಖ್ಯ ಮಂತ್ರಿಗಳಿಗೂ, ಬ್ರಿಟಿಷ್ ಫಾರಿನ್ ಸೆಕ್ರೆಟರಿ ಏಡನ್ ರವರಿಗೂ ರಾಜಕೀಯ ವಿಚಾರದಲ್ಲಿ ಮತಭೇದ ಉಂಟಾಗಿ ಪರಿಣಾಮವಾಗಿ, ಮಿ|| ಏಡನ್ ರವರೂ, ಅಂಡರ್ ಸೆಕ್ರೆಟರಿ ಲಾರ್ಡ್ ಕ್ರಾನ್‌ಬೋರ್ನ್ ರವರೂ ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿರುತ್ತಾರೆ.

ನಕ್ಕಿದ್ದಕ್ಕೆ ಜೈಲು

ಸಾರ್ವಜನಿಕ ಸ್ಥಳದಲ್ಲಿ ಒಬ್ಬನು ಇನ್ನೊಬ್ಬನನ್ನು ನೋಡಿ ನಗುತ್ತಿದ್ದನು. ಅವನು ಸುಮ್ಮನೇ ಬಿಟ್ಟಾನೆ, ಕೇಸು ಹೂಡಿದ. ಮ್ಯಾಜಿಸ್ಟ್ರೇಟರು ಜುಲ್ಮಾನೆ ಹಾಕಿದರು. ಈ ಕಾಲದಲ್ಲಿ ಯಾರು ಜುಲ್ಮಾನೆ ಕೊಡುವರು. ನೆಟ್ಟಗೇ ಜೈಲಿಗೆ ಹೋದ!

ಮುಂದಿನ ಕಾಂಗ್ರೆಸ್

ಮಹಾಸಭೆಯನ್ನು ಮಹಾಕೋಸಲದಲ್ಲಿ ನಡೆಸುವುದೆಂದು ತೀರ್ಮಾನಿಸಲಾಗಿದೆ.

Our Branch Office
M/s Neo Easy Competitions,
"Ranga Vilas"
Near Majestic Cinema, Bangalore City

ಸಂಯುಕ್ತ ರಾಷ್ಟ್ರ .

ಇಲ್ಲಿಯ ಪಾಠಶಾಲೆಗಳಲ್ಲಿ ಕಾಗದಗಳ ತಯಾರಿಯನ್ನು ಕಲಿಸಲು ಯೋಚಿಸಿರುವರು.

ದರೋಡೆಗಳ ತವರೂರು ಯಾವುದು ?

ಚಿಕಾಗೋ ಎಂದು ಇದುವರೆಗೂ ಹೇಳುತ್ತಿದ್ದರು. ಲೆಕ್ಕಾಚಾರ ನಡೆಸಿದಾಗ ವಾಷಿಂಗ್ಟನ್ ಮಹಾಪಟ್ಟಣವೇ ಆ ಹೆಸರನ್ನು ಹೊಂದುವ ಪುಣ್ಯವನ್ನು ಪಡೆದಿರುವದೆಂದು ತಿಳಿಯಬಂದಿದೆ. ಕಳೆದ ವರ್ಷ ಅಲ್ಲಿ 2394 ದರೋಡೆಗಳು ನಡೆದವು. ತಿಂಗಳಿಗೆ 250 ರಂತೆ ಮೋಟಾರುಗಳು ಕದಿಯಲ್ಪಟ್ಟವು. 48 ಗಂಟೆಗಳ ಕಾಲದಲ್ಲಿ 50 ಕ್ರೂರ ಕಾರ್ಯಗಳು ಅಲ್ಲಿ ನಡೆಯುವವು.

For Sale

ಅಂದವಾದ ಮಂಜಿನಂತೆ ಬೆಳ್ಳಗಿರುವ ಬಾಳಿಕೆ ಬರುವಂಥಾ ರೇಷ್ಮೆ ಬಟ್ಟೆ, ೯ ಗಜ ಉದ್ದ ೫೪ ಅಂಗುಲ ಅಗಲ, ೬ ಷರ್ಟುಗಳಿಗೆ ಆಗುತ್ತದೆ. ಬೆಲೆ ರೂ. ೫-೮-೦ ಮಾತ್ರ. ಅಂಚೆವೆಚ್ಚ ಉಚಿತ. ಧಾರಾಳವಾದ ನಿಯಮಗಳ ಮೇಲೆ ಏಜೆಂಟರು ಬೇಕಾಗಿದ್ದಾರೆ. ಹೆಚ್ಚು ವಿಚಾರಗಳಿಗೆ ಬರೆಯಿರಿ.

Bharat Knitting Works
Ludhiana, (Panjab).

ಸೂಚನೆ:—"ರೇಡಿಯಂಟ್ ಸ್ಪರ್ಧೆ ನಂ. ೧೨' ಕಾರಣಾಂತರದಿಂದ ಇನ್ನು ಎರಡು ವಾರ ಮುಂದುವರಿಸಲ್ಪಟ್ಟಿದೆ.

ರೇಡಿಯಂಟ್ ಸ್ಪರ್ಧೆ ನಂ. 12

ಬಹುಮಾನ ರೂ. ೪೦

ಮೊದಲನೇ ಬಹುಮಾನ ರೂ. **20** ಇತರ ಬಹುಮಾನಗಳು ರೂ. **20**

ಕಡೆಯ ತಾ|| **10-3-38**; ಉತ್ತರವು ತಾ|| **16-3-38** ಸತ್ಯವಾದಿಯಲ್ಲಿ ಪ್ರಕಟಿಸಲ್ಪಡುವುದು

ಪ್ರವೇಶ ಧನ ಪ್ರತಿ ಉತ್ತರಕ್ಕೂ ಎರಡಾಣೆ

ನಿಯಮಗಳು:—ಮೊಹರು ಮಾಡಿಇಟ್ಟಿರುವ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ ಮೊದಲನೆ ಬಹುಮಾನವೂ, ಒಂದು ತಪ್ಪಿನದಕ್ಕೆ ಎರಡನೆ ಬಹುಮಾನವೂ ಕೊಡಲಾಗುತ್ತೆ. ಸರಿಯಾದ ಉತ್ತರಗಳು ಹೆಚ್ಚಾಗಿ ಬಂದಲ್ಲಿ ಅವಕ್ಕೆ ಹಂಚಲಾಗುವುದು. ಪ್ರವೇಶಧನ ಪ್ರತಿ ಉತ್ತರಕ್ಕೂ 2 ಆಣೆ ಪೋಸ್ಟೇಜು ಸ್ಟಾಂಪುಗಳು ಕಳುಹಿಸಬಹುದು. 4 ಉತ್ತರಕ್ಕೆ ಮೇಲ್ಪಟ್ಟವರು ಪ್ರವೇಶಧನವನ್ನು ಮನಿಯಾರ್ಡರ್ ಅಥವಾ ಕ್ರಾಸ್ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬೇಕು. ಉತ್ತರಗಳ ಸಂಖ್ಯೆಗನುಗುಣವಾಗಿ ಬಹುಮಾನವು ಹೆಚ್ಚು ಕಡಮೆ ಮಾಡಲಾಗುವುದು. ಮ್ಯಾನೇಜರ್ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು.

ಉತ್ತರಗಳನ್ನು ಕಳುಹಿಸುವವರು ಸತ್ಯವಾದಿ ಕೂಪನ್ನಿನಲ್ಲಿ ಬರೆಯಬೇಕು. ಹೆಚ್ಚು ಉತ್ತರಗಳನ್ನು ಕಳುಹಿಸುವವರು ಒಂದು ಉತ್ತರವನ್ನು ಸತ್ಯವಾದಿ ಕೂಪನ್ನಿನಲ್ಲಿ ಬರೆದು ಬಾಕಿ ಉತ್ತರಗಳನ್ನು ಖಾಲಿ ಕಾಗದದಲ್ಲಿ ಬರೆದು ಕಳುಹಿಸಬಹುದು.

1 ಗೋ			■	2 ಸು			■
	■	■	3 ಆ		■	4 ರ	5
	ಮಾ	6 ಪ		■	■		
ಕೆ	■	ರ	■	7 ಆ	8	■	ಕ
■	9 ವಾ			■	10 ಟ		■
11 ಮ	■	12	ರ	ಲೋ		■	13
	■	ಏ	■	■	■	14	ವ
■	15	ತ್ರ	■	16		ಮ	ತ್ರ

ಕೂಪನ್ ನಂ........ ತಾ||..............................

ಹೆಸರು ....

ವಿಳಾಸ ....

ಎಡದಿಂದ ಬಲಕ್ಕೆ

1 ಶ್ರೀಕೃಷ್ಣ 2 ಉತ್ತಾನಪಾದರಾಯನ ಪತ್ನಿ 3 ಒಂದು ಚತುಷ್ಪಾದ ಪ್ರಾಣಿ 4 ಮನ್ಮಥನ ಪತ್ನಿ 7 ಹಬೆ 9 ದಶಾವತಾರಗಳಲ್ಲೊಂದು 10 ಮಕ್ಕಳು ಇದನ್ನು ಪ್ರೀತಿಸುತ್ತಾರೆ (ತಾರುಮಾರು) 12 ಇದು ಇರುವುದೆಂದು ಹಿಂದೂಗಳ ನಂಬಿಕೆ. 14 ಬಂಧು. 15 ಹಿಂದಿನ ಕಾಲದಲ್ಲಿ ಇವು ಹೆಚ್ಚಾಗಿದ್ದುವು. 16 ಕರ್ಣಾಟಕದ ವಾರ್ತಾಪತ್ರಿಕೆ.

ಮೇಲಿಂದ ಕೆಳಕ್ಕೆ

1 ಹಿಂದೂಗಳು........ಮಾಡುತ್ತಾರೆ 3 ಹನ್ನೆರಡು ಕಾಸು 4 ಇದರಿಂದ ಭಕ್ಷ್ಯಗಳನ್ನು ತಯಾರಿಸುತ್ತಾರೆ. 5 ಇದನ್ನು ಹಣೆಗೆ ಇಟ್ಟಿರುತ್ತಾರೆ. 6 ಅತಿ ಶ್ರೇಷ್ಠ 8 ವಿಕಟ ಸ್ಥಳಪಲ್ಲಟ 11 ಇದು ತಮಗಿರಲೆಂದೇ ಎಲ್ಲರ ಆಶೆ. 13 ತನು (ತಾರುಮಾರು)

ಮ್ಯಾನೇಜರ್, ರೇಡಿಯೆಂಟ್ ಸ್ಪರ್ಧೆ,
ಸತ್ಯವಾದಿ ಆಫೀಸು, ಚಾಮರಾಜಪುರಂ, ಮೈಸೂರು.

ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ಮೈಸೂರಿನಲ್ಲಿ ನಮ್ಮ ಆಫೀಸಿಗಾಗಲಿ, ರೇಡಿಯಂಟ್ ನ್ಯೂಸ್ ಏಜೆನ್ಸಿಗಾಗಲೀ; ಬೆಂಗಳೂರಿನಲ್ಲಿ ನವೀನ ಸುಲಭ ಸ್ಪರ್ಧೆಗಳ ಆಫೀಸಿಗಾಗಲಿ ಪಾವತಿಮಾಡಬಹುದು.

ಬೆಂಗಳೂರು ಬಸವನಗುಡಿಯಲ್ಲಿರುವವರು ವ|| ವ್ಯಾಕರಣ ನರಸಿಂಹಮೂರ್ತಿ, ವಿ. ಎಸ್. ಬ್ರದರ್ಸ್ ಬುಕ್ ಬೈಂಡರ್ಸ್ ಅಂಡ್ ಬುಕ್ ಸೆಲ್ಲರ್ಸ್ ಗಾಂಧಿ ಬಜಾರ್ ಬಸವನಗುಡಿ, ಇವರಲ್ಲಿ ಪಾವತಿ ಮಾಡಿ ರಶೀತಿ ಪಡೆಯಬಹುದು.

ಶಕ್ತಿಸುಧಾ ಉತ್ತಮವಾದ ಟಾನಿಕ್

ಸತ್ಯವಾದಿ

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆ

ಜಗತ್ತಿನಲ್ಲೇ ಅತ್ಯಂತ ದೊಡ್ಡದಾದ ಈ ಸಭೆಯ ೫೧ ನೇ ಅಧಿವೇಶನವು ಹರಿಪುರದಲ್ಲಿ ಮಹಾ ವಿಜೃಂಭಣೆಯಿಂದ ನಡೆಯಿತು. ಈ ಸಲದ ಕಾಂಗ್ರೆಸ್ ಅಧಿವೇಶನವು ತುಂಬಾ ಮಹತ್ವವುಳ್ಳದ್ದು. ಮೊದಲಾಗಿ, ಭರತಖಂಡದಲ್ಲಿ ಪ್ರಥಮತಃ ಶಾಸನಭಂಗ ಚಳುವಳಿಯನ್ನು ಪ್ರಾರಂಭಿಸಲು ಉತ್ತಮವಾದ ತಾಲ್ಲೋಕೆಂದು ಮಹಾತ್ಮಾ ಗಾಂಧಿಯವರು ನಿರ್ಧರಿಸಿ ಸತ್ಯಾಗ್ರಹಕ್ಕೆ ಸಿದ್ಧಪಡಿಸಿದ ಬಾರ್ಡೋಲಿ ತಾಲ್ಲೋಕಿನಲ್ಲಿಯೇ ಈ ಅಧಿವೇಶನವು ನಡೆದುದು. ಎರಡನೆಯದಾಗಿ ತರುಣರ ಮುಂದಾಳುಗಳಾದ ಶ್ರೀ ಸುಭಾಷ ಬೋಸರು ಅಧ್ಯಕ್ಷರಾಗಿರುವುದು ಇನ್ನೊಂದು ಮಹತ್ವವು. ಮೂರನೆಯದಾಗಿ ಭಾರತದ ಎರಡು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಗಳಿಗೂ ಗೌರ್ನರುಗಳಿಗೂ ಭಿನ್ನಾಭಿಪ್ರಾಯ ಬಂದು, ಮಂತ್ರಿಗಳು ರಾಜೀನಾಮೆ ಕೊಟ್ಟ ಅದೊಂದು ಬಿಕ್ಕಟ್ಟಿನ ಪರಿಸ್ಥಿತಿಯುಂಟಾದ ಸಮಯದಲ್ಲಿಯೇ ಈ ಅಧಿವೇಶನವು ನಡೆದುದರಿಂದ, ಪ್ರತಿಯೊಂದು ವಿಧದಲ್ಲಿ ನೋಡಿದರೂ ಈ ಸಲದ ಕಾಂಗ್ರೆಸ್ ಮಹಾಸಭೆಯು ಕಾಂಗ್ರೆಸ್ ಇತಿಹಾಸದಲ್ಲೇ ಮುಖ್ಯವೆನಿಸಿದೆ. ಅದರಂತೆ ಅಧ್ಯಕ್ಷರ ಭಾಷಣವಾದರೂ ಒಳ್ಳೆಯ ಹುರುಪಿನಿಂದಲೇ ಕೂಡಿತ್ತು. ವಿದೇಶಿಯರ ನೀತಿಯೊಡನೆ ಭಾರತವನ್ನು ತುಲನೆಮಾಡಿ, ವಿಮರ್ಶೆ ಮಾಡಿ ಅದರ ಪರಿಹಾರೋಪಾಯವನ್ನು ಸೂಚಿಸಿ ತುಂಬಾ ಅರ್ಥಗರ್ಭಿತವಾಗಿಯೂ ಸ್ಫೂರ್ತಿದಾಯಕವಾಗಿಯೂ ಆಗಿತ್ತು. ಇನ್ನು ಸಭೆಯ ಕಾರ್ಯಕಲಾಪಗಳೂ ತಕ್ಕಂತೆಯೇ ಇದ್ದುವೆಂದು ಬೇರೆ ಹೇಳಬೇಕಾಗಿಲ್ಲ.

ಇಂಗ್ಲೀಷ್ ಭಾಷಾ ಪಾಂಡಿತ್ಯವಿಲ್ಲದೇ ದೇಶೀಯ ಭಾಷೆಗಳಲ್ಲಿ ಮಾತ್ರ ವಿದ್ಯಾವಂತನಾಗಿರುವವನಿಗೆ ಈಗಿನ ಕಾಲದಲ್ಲಿ ಗೌರವವಿಲ್ಲ. ಆ ತಪ್ಪು ದಾರಿಯು ಇನ್ನು ಮುಂದೆ ಇರಕೂಡದೆಂಬ ಅಭಿಪ್ರಾಯದಿಂದ, ಇನ್ನು ಮುಂದೆ ದೇಶೀಯ ಭಾಷೆಗಳಲ್ಲಿಯೇ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ನಿರ್ಣಯವೊಂದು ಅಂಗೀಕೃತವಾಯಿತು.

ದೇಶೀಯ ಸಂಸ್ಥಾನಗಳ ವಿಷಯವಾಗಿ ವರ್ಕಿಂಗ್ ಕಮಿಟಿಯವರು ಸಿದ್ಧಗೊಳಿಸಿದ ನಿರ್ಣಯವು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಅಂಗೀಕಾರವಾಯಿತು. ಮುಖ್ಯವಾಗಿ ದೇಶೀಯ ಸಂಸ್ಥಾನಗಳ ಪ್ರಜೆಗಳು ಬ್ರಿಟಿಷ್ ಇಂಡಿಯಾದಿಂದ ತಮ್ಮ ಸ್ವಾತಂತ್ರ್ಯ ಚಳವಳಿಯನ್ನು ನಡೆಸಿ ತಮ್ಮ ಕಾರ್ಯಸಾಧನೆಯಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿಸದೇ ಹೊರಗಿನವರನ್ನೇ ಕಾದು ಕುಳಿತುಕೊಳ್ಳುವ ಪರಿಸ್ಥಿತಿಯುಂಟಾಗಬಾರದೆಂಬುದು ಆ ನಿರ್ಣಯದ ಉದ್ದೇಶವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸಿ, ಸಂಸ್ಥಾನದ ಪ್ರಜೆಗಳು ಮಾಡುತ್ತಿರುವ ಸ್ವಾತಂತ್ರ್ಯ ಚಳವಳಿಗೆ ಕಾಂಗ್ರೆಸ್ಸು ಸಂಪೂರ್ಣ ಸಹಾನುಭೂತಿಯನ್ನು ತೋರಿಸುವುದೆಂಬ ಭರವಸೆಯ ಮೇಲೆ ನಿರ್ಣಯವು ಅಂಗೀಕೃತವಾಯಿತು. ಸಂಸ್ಥಾನದ ಪ್ರಜೆಗಳನ್ನು ಕಾಂಗ್ರೆಸ್ಸು ಕೈಬಿಟ್ಟಿತೆಂಬ ತಪ್ಪು ಅಭಿಪ್ರಾಯವು ಇದರಿಂದ ದೂರವಾಯಿತೆನ್ನಬೇಕು. ಇದೊಂದು ಅತ್ಯಂತ ಮುಖ್ಯವಾದ ನಿರ್ಣಯವು.

ಇನ್ನೊಂದು ಮುಖ್ಯವಾದ ವಿಷಯವೆಂದರೆ,— ಬಿಹಾರ್ ಮತ್ತು ಯು. ಪಿ. ಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಇತ್ತಿರುವದರಿಂದ ಇತರ ಪ್ರಾಂತ್ಯಗಳ ಮಂತ್ರಿಗಳೂ ರಾಜೀನಾಮೆಯನ್ನು ಕೊಡಬೇಕೇ? ಎಂಬ ಪ್ರಶ್ನೆಯೂ ಕೂಡಾ ಸುಲಭವಾಗಿ ವಿವೇಚನೆ ಮಾಡಲ್ಪಟ್ಟಿತು. ಇತರ ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಡುವ ಅವಶ್ಯವಿಲ್ಲವೆಂಬುದೇ ನಿರ್ಧಾರವಾಯಿತು. ಅಂತು ಈ ಸಲದ ಅಧಿವೇಶನವು ಅನೇಕ ಪ್ರಮುಖ ವಿಚಾರಗಳನ್ನು ಚರ್ಚಿಸಿ ಒಗೆ ಹರಿಯಿತು. ಸುಭಾಷ್ ಬೋಸರ ನಾಯಕತ್ವದಿಂದ ಭಾರತದಲ್ಲಿ ಕಾಂಗ್ರೆಸ್ ಪ್ರಚಾರವು ಒಳ್ಳೆಯ ಹುರುಪಿನಿಂದ ನಡೆಯುವುದೆಂಬುದಕ್ಕೆ ಸಂದೇಹವಿಲ್ಲ.

ಭಾರತೀಯ ರೈಲು ಇಲಾಖೆಯಲ್ಲಿ 1925 ನೇ ವರ್ಷದಲ್ಲಿ ಶೇಕಡ 28 ಮಂದಿ ಮಾತ್ರ ಭಾರತೀಯರಿದ್ದರಾಗಲಿ ಕಳೆದ ವರ್ಷದಲ್ಲಿ ಅವರ ಸಂಖ್ಯೆಯು ಶೇಕಡ 47 ಕ್ಕೆ ಬಂದಿರುವಂತೆ ತಿಳಿದುಬಂದಿದೆ. ಆದರೆ ದೊಡ್ಡ ದೊಡ್ಡ ಉದ್ಯೋಗಗಳು ಇನ್ನೂ ಆಂಗ್ಲೇಯರಿಗೆ ಮೀಸಲಾಗಿವೆ.

ಬರ್ಮಾದಲ್ಲಿರುವ ಭಾರತೀಯರಲ್ಲಿ ಸ್ತ್ರೀಯರಿಗಿಂತ ಪುರುಷರ ಸಂಖ್ಯೆಯು ಹೆಚ್ಚಾಗಿರುವದರಿಂದಲೂ, ಬರ್ಮಾ ನಿವಾಸಿಗಳಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆಯು ಹೆಚ್ಚಾಗಿರುವದರಿಂದಲೂ, ಭಾರತೀಯರೂ ಬರ್ಮಾಗಳೂ ಕಾನೂನು ಪ್ರಕಾರ ವಿವಾಹ ಮಾಡಿಕೊಳ್ಳಲು ಅವಕಾಶವಿಲ್ಲದಿರುವದರಿಂದಲೂ ಅಲ್ಲಿ ವ್ಯಭಿಚಾರಕ್ಕೆ ಹೆಚ್ಚು ಅವಕಾಶವಿರುವದೆಂದೂ ತಿಳಿಯಬಂದಿದೆ. ಈ ಪರಿಸ್ಥಿತಿಯು ಬದಲಾಯಿಸುವಂತೆ ಮಾಡುವದು ಸರ್ಕಾರದ ಮುಖ್ಯ ಕರ್ತವ್ಯವಾಗಿರುತ್ತದೆ. ಮಲಯಾ ದ್ವೀಪಗಳಲ್ಲಿಯೂ ಕೂಡ ವ್ಯಭಿಚಾರವು ಅತಿ ಹೆಚ್ಚೆಂದು ಅಲ್ಲಿಗೆ ಹೋಗಿ ಬಂದವರೊಬ್ಬರು ತಿಳಿಸಿರುವರು.

ಅಮೇರಿಕಾ ಶಾಸ್ತ್ರಜ್ಞರಾದ ರಾಬರ್ಟ್ ಮೋರಿಸ್ ರವರು ಈಚೆಗೆ ಒಬ್ಬ ಬಾಲಕನನ್ನು ಬಾಲಕಿಯನ್ನಾಗಿ ಶಸ್ತ್ರ ಚಿಕಿತ್ಸೆಯಿಂದ ಮಾಡಿರುವರು.

ಸರ್ ಮಿರ್ಜಾರವರ ದೇಶಪ್ರೇಮ

“ನಾನು ಹುಟ್ಟಿದುದು ಬೆಂಗಳೂರಿನಲ್ಲಿ, ನನ್ನ ವಿದ್ಯಾಭ್ಯಾಸವು ಬೆಂಗಳೂರಿನಲ್ಲಿ ನಡೆದುದು, ನನ್ನ ಆಟಪಾಟಗಳೆಲ್ಲವೂ ಆದದ್ದು ಬೆಂಗಳೂರಿನಲ್ಲಿ, ನಾನು ಈಗ ಸರ್ಕಾರದ ಹುದ್ದೆಯಲ್ಲಿದ್ದು ಕೆಲಸವನ್ನು ಮಾಡಿಕೊಂಡು ವಾಸವಾಗಿರುವುದೂ ಬೆಂಗಳೂರಿನಲ್ಲಿ” ಎಂದು ಸರ್ ಮಿರ್ಜಾರವರು ಮೊನ್ನೆ ಲಾಲ್‌ಬಾಗಿನಲ್ಲಿ ಅವರಿಗಾಗಿ ಏರ್ಪಡಿಸಿದ ಸತ್ಕಾರಕೂಟದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದುದನ್ನು ನೋಡಿದರೆ ಬೆಂಗಳೂರಿನ ವಿಷಯದಲ್ಲಿ ಅವರಿಗೆ ಎಷ್ಟು ಅಭಿಮಾನ, ಪ್ರೇಮ, ಭಕ್ತಿಗಳಿರುತ್ತವೆ ಎಂಬುದನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಸರ್ ಮಿರ್ಜಾರವರು ಮೈಸೂರು ಸಂಸ್ಥಾನದಲ್ಲಿ ಹುಟ್ಟಿಬೆಳೆದವರು. ಸಂಸ್ಥಾನಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದವರು. ಮೈಸೂರು ಸಂಸ್ಥಾನವು ‘ತನ್ನ ದೇಶ’ ವೆಂಬ ಅಭಿಮಾನ ಅವರಿಗಿದೆ. ಸಂಸ್ಥಾನದಲ್ಲಿರುವ ನಗರಗಳು, ಪಟ್ಟಣಗಳು, ಹಳ್ಳಿಗಳೂ ಕೂಡ ಅಂದವಾಗಿ ಇರಬೇಕೆಂಬುದು ಅವರ ಆಶೆ. ನಗರಗಳೂ ಗ್ರಾಮಗಳೂ ಎಷ್ಟು ಸುಂದರವಾದರೆ ಅಷ್ಟು ಪ್ರೀತಿ ಅವರಿಗೆ. ಅದರಲ್ಲೂ ಸಂಸ್ಥಾನದ ಮುಖ್ಯ ನಗರಗಳಾದ ಬೆಂಗಳೂರು ಮತ್ತು ಮೈಸೂರು ನಗರಗಳ ವಿಷಯದಲ್ಲಿ ಅವರಿಗೆ ತುಂಬಾ ಆಸಕ್ತಿ. ಎಷ್ಟು ಹೇಳಿದರೇನು? ಮುಖ್ಯವಾಗಿ ಅದ್ಯಂತವಾಗಿ ಸಂಸ್ಥಾನವು ಉತ್ತಮಗೊಳ್ಳಬೇಕೆಂಬುದೇ ಅವರ ಮಹದಾಶೆ ಎಂದು ಧಾರಾಳವಾಗಿ ಹೇಳಬಹುದು. ತನ್ನ ದೇಶದ ಮೇಲೆ ಅವರಿಗೆ ಅಷ್ಟು ಭಕ್ತಿ ಇದೆ.

“ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳನ್ನು ಕುರಿತು ಆಲೋಚಿಸಿ ಸಲಹೆಗಳನ್ನು ಒಪ್ಪಿಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡುವ ವಿಚಾರವಾಗಿ ಸರ್ಕಾರದವರು ತೀವ್ರಾಲೋಚನೆ ಮಾಡುತ್ತಿರುವರೆಂಬುದನ್ನೂ ಅದರ ತೀರ್ಮಾನವನ್ನು ತ್ವರಿತದಲ್ಲಿಯೇ ಪ್ರಕಟಿಸಲಾಗುವುದೆಂಬುದನ್ನೂ ತಮಗೆ ತಿಳಿಸಲು ಇಚ್ಛಿಸುತ್ತೇನೆ” ಎಂಬದಾಗಿ ಅವರು ಹೇಳಿದ ವಾಕ್ಯಗಳು, ಸರ್ ಮಿರ್ಜಾರವರಿಗೆ ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಇರತಕ್ಕ ಆಸಕ್ತಿಯನ್ನು ತೋರಿಸುತ್ತದೆ. ಸರ್ ಮಿರ್ಜಾರವರು ಮೈಸೂರು ಪ್ರಜೆಗಳಿಗೆಲ್ಲಾ ಅಭಿನಂದನಾರ್ಹರು. ಅವರ ಕಾಲದಲ್ಲೇ ರಾಜಕೀಯ ಸುಧಾರಣೆಗಳು ಏರ್ಪಟ್ಟು, ಆ ಕೀರ್ತಿಯು ಅವರಿಗೆ ಲಭಿಸಲೆಂಬುದೇ ನಮ್ಮ ಹಾರೈಕೆ.

ದೇಶದಲ್ಲೆಲ್ಲಾ ವಿದ್ಯಾರ್ಥಿಗಳ ಚಳವಳಿಯು ಹೆಚ್ಚಾಗಿರುವಿಕೆಯನ್ನು ಕಂಡು ಮುಂಬೈ ಮಂತ್ರಿ ವರ್ಗವು 18 ವರ್ಷ ಮೀರಿದ ವಿದ್ಯಾರ್ಥಿಗಳು ರಾಜಕೀಯ ಸಭೆಗಳಲ್ಲಿ ಭಾಗವಹಿಸಲು ಅವಕಾಶವನ್ನು ಕಲ್ಪಿಸಿರುವಂತೆ ತಿಳಿಯಬಂದಿದೆ.

ಸಾಮಾಜಿಕ ನಾಟಕ

ವಿಧಿ ವಿಲಾಸ

ಲೇಖಕರು—ಟಿ. ಆರ್. ಸೂರ್ಯನಾರಾಯಣ
ಅಯ್ಯರ್, ಗುಂಜಿಗುಂಟೆ)

(ಹಿಂದಿನ ವಾರದಿಂದ ಮುಂದುವರಿದುದು)

ದೃಶ್ಯ ೪

(ಕಮಲು ಮತ್ತು ರತ್ನ ಇಬ್ಬರೂ ಕೈಯಲ್ಲಿ ಪುಸ್ತಕಗಳೊಡನೆ ಪ್ರವೇಶಿಸುವರು. ಸಮಯ—ಸಾಯಂಕಾಲ ; ಸ್ಥಾನ—ರತ್ನಳ ಮನೆ)

ರತ್ನ—ಕುಳಿತುಕೋ ಕಮಲು, ಏಕೆ ಇವತ್ತು ಮುಖ ಬಾಡಿದ ಹಾಗಿದೆ. ಕಾರಣವೇನು, ಮನೆಯಲ್ಲಿ ಏನಾದರೂ ಹೇಳಿದರೇ ?

ಕಮಲು—ಏನೂ ಇಲ್ಲ ರತ್ನ. ಮೈಲಿ ಸ್ವಲ್ಪ ಸರಿಯಾಗಿಲ್ಲ ಅಷ್ಟೇ, ತಲೇ ನೋವು ಸ್ವಲ್ಪ ಇದೆ.

ರತ್ನ—ಲಲಿತೂಗೆ, ಲೀಲಾಗೆ, ಲಕ್ಷ್ಮೀಗೆ ಎಲ್ಲರಿಗೂ ಹೇಳಿದ್ದೆ ; ಒಬ್ಬರೂ ಬರಲಿಲ್ಲ ನೋಡು. ಏಕೆ ನಮ್ಮ ಮನೆಗೆ ಬರಕೂಡದೇನು ?

ಮೂರ್ತಿ—(ಅವಸರದಿಂದ ಬಂದು) ರತ್ನಾ, ಅಮ್ಮಾ ಯಾಕೋ ಕೂಗ್ತಾಳೆ, ಪಕ್ಕದ ಮನೆಯಲ್ಲಿದ್ದಾಳೆ, ಬೇಗ ಬರಬೇಕಂತೆ, ಹೋಗಿ ವಿಚಾರಿಸು.

ರತ್ನ—(ಎದ್ದು) ಆದರೆ, ನೀನು ಇಲ್ಲೇ ಇರು ಕಮಲು, ಬೇಗ ಬರುತ್ತೇನೆ. ಹಾಗೇ ಯಾವುದಾದರೂ ಓದುತ್ತಾ ಇರು.

(ಹೊರಡುವಳು)

ಮೂರ್ತಿ—(ಸ್ವಗತ) ಇವಳನ್ನೇನೋ ತೊಲಗಿಸಿದ್ದಾಯಿತು ಈಗ ಏನು ಮಾಡಲಿ ಹೇಗೆ ನಾನೇ ಮೊದಲು ಮಾತನಾಡಿಸಲಿ, ಅವಳಿಗೆ ನಾಚಿಕೆ (ಯೋಚಿಸಿ) ಆಗಲಿ ಈ ಶನಿಯು ಬಂದುಬಿಟ್ಟಾಳು ಬಾಗಿಲು ಹಾಕಿ ಅನಂತರ ಮಾತನಾಡಿಸುವೆನು (ಕಮಲೂಗೆ) ಇಲ್ಲೇ ಇರಿ ಬಂದೆ.

(ಹೊರಡುವನು)

ಕಮಲು—ಇವರು ಇಲ್ಲೇ ಇರಿ ಬಂದೆ ಎಂದು ಹೇಳಿ ಹೋದರು ಪುನಃ ಬರುತ್ತಾರೆ, ಹೇಗೆ ಮಾತನಾಡಲಿ, ಇಷ್ಟವೇನೋ ಇದೆ, ಅದೂ ಇಬ್ಬರೇ ಇರೋದು,

ಮೂರ್ತಿ—(ಹಿಂತಿರುಗಿ ಬರುತ್ತಾ) ನಿಮ್ಮ ಹೆಸರು ಏನು ಹೇಳಿದಿರಿ ಕಮಲು ಅಂದು ಅಲ್ವೆ ?

ಕಮಲು—(ನಾಚಿಕೆಯಿಂದ ತಲೆತಗ್ಗಿಸಿ) ಹೌದು,

ಮೂರ್ತಿ—ಯಾಕೆ ಸಪ್ಪಗಿದ್ದೀರಿ, ಕ್ಲಾಸಿಗೆ ಹೋಗಲಿಲ್ವೇ ?

ಕಮಲು—ಹೋಗಿದ್ದೆನಲ್ಲಾ. (ಏಳುವಳು)

ಮೂರ್ತಿ—ಕೂತುಕೊಳ್ಳಿ ಪರವಾಯಿಲ್ಲ. ನಿಮ್ಮ ತಂದೆಯವರ ಹೆಸರು ಏನು ? ಏನಾದರೂ ಕೆಲಸದಲ್ಲಿ ಇದ್ದಾರಾ ?

ಕಮಲು—ಅವರ ಹೆಸರು ರಾಮರಾಯರೆಂದು, ಸರ್ವೇ ಆಫೀಸಿನಲ್ಲಿ ಗುಮಾಸ್ತೆ ಹದಿನೈದು ರೂಪಾಯಿ ಸಂಬಳ.

ಮೂರ್ತಿ—ನಮ್ಮ ರತ್ನಳೊಡನೆ ಇನ್ನು ಮೇಲೆ ಓದೋಲ್ಲ ಅಂತ ಹೇಳಿದರಂತೆ ನಿಜವಾ ?

ಕಮಲು—ಹೌದು, ನಮ್ಮ ತಂದೆತಾಯಿಗಳು ಬೇಡ ಅಂತಾರೆ. ನನಗೇನೋ ಬಿಡುವುದಕ್ಕೆ ಮನಸ್ಸಿಲ್ಲ, ಅದೂ ಅಲ್ಲದೆ ಬಡತನಬೇರೆ.

ಮೂರ್ತಿ—ಬಡತನಕ್ಕೋಸ್ಕರ ಇಷ್ಟು ದಿನ ಓದಿ ಇನ್ನು ಮೂರು ತಿಂಗಳು ಓದಿ ಪ್ಯಾಸುಮಾಡದೆ ಬಿಡ್ತಾರೆಯೆ ? ಬೇಕಾದರೆ ನಾನು ದುಡ್ಡು ಕೊಡುತ್ತೇನೆ, ಬಿಡಬೇಡಿ. ನಿಮ್ಮಂಥವರು ಬಿಡುವುದೆಂದರೆ ಯಾರಿಗೆತಾನೆ ಇಷ್ಟ ?

ಕಮಲು—ನನ್ನಿಂದ ನಿಮಗೇಕೆ ತೊಂದರೆ ಅದೂ ಅಲ್ಲದೆ ನಮ್ಮ ತಂದೆತಾಯಿಗಳು ಮದುವೆಯಾಗುವಂತೆ ಒತ್ತಾಯ ಮಾಡುತ್ತಿದ್ದಾರೆ. ಅದೂ ಒರ್ವ ವೃದ್ಧನೊಡನೆ. ಮುಖ್ಯ ನಮ್ಮ ಹಣೇಬರಹ (ಕಣ್ಣೀರನ್ನು ತೊಳೆದುಕೊಳುವಳು).

ಮೂರ್ತಿ—ವ್ಯಸನಪಡಬೇಡಿ ಹೇಳಿದ ಮಾತ್ರಕ್ಕೆ ಆಗಿಬಿಡುತ್ತದೆಯೆ ? ನಿಮಗೆ ಆ ಮದುವೆಯು ಇಷ್ಟವಿಲ್ಲ ತಾನೆ ?

ಕಮಲು—ನಮ್ಮ ಇಷ್ಟಾನಿಷ್ಟಗಳನ್ನು ಕೇಳುವವರು ಯಾರು ? ನಮ್ಮ ತಂದೆತಾಯಿಗಳು ಸಹಾ ಏನು ಮಾಡಿಯಾರು, ಒಳ್ಳೇ ವರನಿಗೆ ವರದಕ್ಷಿಣೆ ಕೊಡಲು ದುಡ್ಡಿಲ್ಲ. ಅವರು ತೋರಿಸಿದ ವರನನ್ನು ಮದುವೆಯಾಗಲೇಬೇಕು. ಬೇರೆ ದಾರಿಯೇ ಇಲ್ಲ.

ಮೂರ್ತಿ—ಆದರೆ ಬೇರೆ ಯಾರನ್ನು ಮದುವೆಯಾಗಬೇಕೆಂದು ಇಷ್ಟ, ಇಲ್ಲದಿದ್ದರೆ ಮದುವೇನೇ ಬೇಡವೋ ?

ಕಮಲು—ತಂದೆತಾಯಿಗಳಿಗೆ ಹೆಚ್ಚಾಗಿ ನೋವನ್ನುಂಟು ಮಾಡದಿರುವುದಕ್ಕಾಗಿ ಈ ವಿವಾಹಕ್ಕೆ ಸಮ್ಮತಿಸುವೆನು. ನನ್ನಿಷ್ಟ ಬೇರೆ ಕಡೆ ಇದೆ ಅದು ಸಾಧ್ಯವಿಲ್ಲ. ಮಾನವನು ಅಮೃತವನ್ನು ಬಯಸಿದಹಾಗೆ (ಮೂರ್ತಿಯನ್ನು ಓರೆ ನೋಟದಿಂದ ನೋಡಿ ತಲೆ ತಗ್ಗಿಸುವಳು).

ಮೂರ್ತಿ—(ಹತ್ತಿರಕ್ಕೆ ಬಂದು) ನಿನ್ನ ಮನಸ್ಸನ್ನು ಅರಿತೆ ಕಮಲು ನಿಜವಾಗಿ ಹೇಳು ನೀನು ನನ್ನನ್ನು ಪ್ರೀತಿಸುವಿಯೋ ಇಲ್ಲವೋ ? ಏನು ಕಮಲು ಓದಿದ ಹುಡುಗಿ ನೀನು ಧೈರ್ಯವಾಗಿ ಹೇಳು ಹೆದರಬೇಡ, ನಿನ್ನ ಮೇಲೆ ನನಗೆ ಅಗಾಧವಾದ ಪ್ರೇಮವಿದೆ. (ಕೈಹಿಡಿದುಕೊಳ್ಳುವನು)

ಕಮಲು—ನಾನೆಲ್ಲಿ ! ತಾವೆಲ್ಲಿ !! ಇಷ್ಟವಿದ್ದರೂ ಕನಸಿನಲ್ಲಿ ನಡೆಯುವುದೂ ಅಸಾಧ್ಯ ಮತ್ತು ದುರ್ಲಭ.

ಮೂರ್ತಿ—ಆ ವಿಷಯ ನನಗೆ ಬಿಟ್ಟುಬಿಡು, ನಾನು ನೋಡಿಕೊಳ್ಳುತ್ತೇನೆ. ನಿನ್ನ ಅಭಿಪ್ರಾಯ ತಿಳಿಸು.

ಕಮಲು—ನಾವಾದರೋ ಸುತರಾಂ ಬಡವರು, ತಾವು ಲಕ್ಷಾಧಿಕಾರಿಗಳು, ಇದರಿಂದ ತಮ್ಮ ಅಂತಸ್ತಿಗೆ ಕುಂದುಕ ಬರಬಹುದು.

ಮೂರ್ತಿ—ಏನು ಹೇಳಿದೆ ? ಕಮಲು ಇಂತಹ ಅಭಿಪ್ರಾಯಗಳನ್ನು ಇಟ್ಟುಕೊಂಡಿರುವುದರಿಂದಲೇ ನಮ್ಮ ದೇಶವು ಈ ಸ್ಥಿತಿಗೆ ಬಂದಿರುವುದು. ಬಡವರಾದರೇನು, ಹಣವಂತರಾದರೇನು ಎಲ್ಲರನ್ನೂ ದೇವರೇ ಸೃಷ್ಟಿಸಿರುವುದು. ಈ ಕೀಳುಭಾವನೆಗಳನ್ನು ತಂದುಕೊಂಡಿರುವುದರಿಂದಲೇ ಹಾಳಾಗಿ ಹೋಗುತ್ತಿರುವುದು. ನಾಯಿಯೂ ತನ್ನ ಪಾಡನ್ನು ಹೇಗೋ ನೋಡಿಕೊಳ್ಳುತ್ತದೆ. ಪ್ರಯೋಜನವೇನು ? ಮನುಷ್ಯನಾಗಿ ಹುಟ್ಟಿದ ಮೇಲೆ ಉಪಕಾರಿಯಾಗಿಯೂ, ಧರ್ಮಮಾರ್ಗಪರಾಯಣನಾಗಿಯೂ ಇರಬೇಕು. ಸಮಾಜದ ಸುಧಾರಕನಾಗಬೇಕು. ಅದಿರಲಿ. ನೀನು ಎಲ್ಲವನ್ನೂ ಓದಿರುವೆ ನನಗೆ ಪರೀಕ್ಷೆಯಾಗಿದ್ದಕ್ಕೆ ನಿನಗೆ ಕೆಲವು ಸಾಮಾನುಗಳನ್ನು ಕೊಡುತ್ತೇನೆ. ಪ್ರೀತಿಯಿಂದ ತೆಗೆದುಕೊಳ್ಳಬೇಕು. (ಸೆಂಟ್ ಬಾಟಲ್, ಬಾಚಣಿಗೆ, ಸೋಪ್ ಬಾಕ್ಸ್, ಮುಂತಾದುವುಗಳನ್ನು ಕೊಡುವನು)

ಕಮಲು—ನಾನೇನೋ ತೆಗೆದುಕೊಳ್ಳುತ್ತೇನೆ. ಮನೆಯಲ್ಲಿ ಯಾರು ಕೊಟ್ಟರು ಎಂದು ಕೇಳಿದರೆ...............

ಮೂರ್ತಿ—ಅದು ಕಷ್ಟವೇ ? ಜಡ್ಜಿ ಶಂಕರರಾಯರ ಮಗಳು ರತ್ನ, ಅವರ ಅಣ್ಣನಿಗೆ ಪರೀಕ್ಷೆಯಾಗಿದ್ದಕ್ಕೆ ಎಲ್ಲರಿಗೂ ಬಹುಮಾನ ಕೊಟ್ಟಳು. ಅಂತ ಡೋಂಗುಬಿಡು ಇದೆಲ್ಲಾ ಹೇಳಿಕೊಡಬೇಕೆ ? ಇದನ್ನು ರತ್ನಳು ಕಂಡುಬಿಟ್ಟರೆ ಅನರ್ಥವಾಗುವುದು. ಇದನ್ನೆಲ್ಲಾ ನಿನ್ನ ಪೆಟ್ಟಿಗೆಯಲ್ಲಿಟ್ಟುಕೊಂಡುಬಿಡು. (ಇಟ್ಟುಕೊಳ್ಳುವಳು) ಮರೆತುಬಿಟ್ಟೆ ಕಮಲು ನಿನ್ನ ಫೀಜಿಗಾಗಿ ಈ ಇಪ್ಪತ್ತೈದು ರೂಪಾಯಿಗಳನ್ನು ತೆಗೆದುಕೊ. ನಿನ್ನ ಖರ್ಚಿಗೂ ಆಗುತ್ತೆ. (ಬಾಗಿಲಕಡೆ ರತ್ನಳು) ಕಮಲೂ, ಕಮಲೂ ಅಗಳಿಯಾಕೆ ಹಾಕಿದ್ದಿ, ಬಾಗಿಲು ತೆಗೆ (ಎಂದು ಕೂಗುವಳು).

ಮೂರ್ತಿ—ಕಮಲು ರತ್ನಳು ಬಂದೇಬಿಟ್ಟಳು ಏನು ಮಾಡುವುದು ? (ಯೋಚಿಸಿ) ನೀನು ಸುಮ್ಮನಿರು ಹೊರಟು ಹೋದೆ ಎಂದು ಹೇಳಿಬಿಡುತ್ತೇನೆ. (ಕಡೆಗೆ ತಿರುಗಿ) ರತ್ನ, ನಿನ್ನ ಸ್ನೇಹಿತೆ ಇಷ್ಟು ಹೊತ್ತೂ ಕಾದಿದ್ದಳು ನೀನು ಬರಲಿಲ್ಲ ಎಂದು ಈಗತಾನೆ ಹೋದಳು ಇಲ್ಲೇ ಸಮೀಪದಲ್ಲೇ ಹೋಗ್ತಾ ಇರಬೇಕು ಹೋಗಿ ನೋಡು. (ಕಮಲು ಕಡೆಗೆ ತಿರುಗಿ) ಏನು ಕಮಲು ನಾನು ಮಾಡಿದ್ದು ನಿನಗೆ ಹೇಗೆ ತೋರುತ್ತೆ ? ತಪ್ಪೇ...............

ಕಮಲು—ನಿಮಗೆ ಹೇಗೆ ತೋರಿದರೆ ನನಗೂ ಹಾಗೆಯೇ............

ಮೂರ್ತಿ—ನನಗೆ ನಿನ್ನೊಡನೆ ಯಾವಾಗಲೂ ಬೆರೆತಿರಬೇಕೆಂದು ತೋರುತ್ತೆ ನಿನಗೆ........ (ಕಮಲು ಓರನೋಟದಿಂದ ನೋಡಿ ನಗುವಳು) ಅದಿರಲಿ ಕಮಲು ನೀನು ಪ್ರೀತಿಯಿಂದ ನಿನ್ನಲ್ಲಿರುವ ಯಾವುದಾದರೊಂದನ್ನು ಕೊಟ್ಟರೆ ಬಹಳ ಸಂತೋಷವಾಗುತ್ತೆ.

ಕಮಲು—ಈ ಬಡವಳ ಹತ್ತಿರ ತಮಗೆ ಕೊಡುವಂತಹ ವಸ್ತು ಯಾವುದೂ ಇಲ್ಲ

ಬೇಕಾದ್ದನ್ನು ತಾನೇ ತೆಗೆದುಕೊಳ್ಳಬಹುದು.

ಮೂರ್ತಿ—ಹೋಗಲಿ. ನಿನ ತಲೆಯಲ್ಲಿ ಮುಡಿದುಕೊಂಡಿರುವ ಒಂದು ಗುಲಾಬಿಯ ಹೂವನ್ನು ಪ್ರೀತಿಯಿಂದ ಕೊಡು, ಅದೇ ನನಗೆ ಸಾಕು ಬಹಳ ಸಂತೋಷವಾಗುತ್ತೆ,

ಕಮಲು—ತಮಗೆ ಸರ್ವಾಧಿಕಾರವುಂಟು, ತೆಗೆದುಕೊಳ್ಳಬಹುದು. (ಮೂರ್ತಿ ತೆಗೆದುಕೊಳ್ಳುವನು).

ಮೂರ್ತಿ—ಕಮಲೂ ಪುನಃ ರತ್ನಳು ಬರುವವೇಳೆಗೆ ನಾನೇ ಅವಳಲ್ಲಿಗೆ ಹೋಗಿ ನೀನು ಬೇರೆ ಕೊಠಡಿಯಲ್ಲಿ ಕೂತಿದ್ದೆ, ಇಲ್ಲಿಯೇ ಇದ್ದೀಯೆ ಎಂದು ಹೇಳುತ್ತೇನೆ. ಅನಂತರ ನೀನು ಮನೆಗೆ ಹೋಗಬಹುದು. ಪುನಃ ನಿನ್ನನ್ನು ನೋಡುವುದು (ಸ್ವಲ್ಪ ಯೋಚಿಸಿ) ಆಗಲಿ ನಿನ್ನ ದಯೆ ಇದ್ದರೆ ಸ್ಕೂಲಿಗೆ ಹೋಗು ಪುನಃವಾಗ ನಾಳೆ ನೋಡುತ್ತೇನೆ. ಬರ್ತೀನೆ ಕಮಲು (ಎಂದು ಹೇಳಿ ಮುಖವನ್ನು ನೋಡುತ್ತ ನಗುತ್ತ ಹೋಗುವನು, ಕಮಲುವೂ ನಗುವಳು)

ಕಮಲು—ದೇವಾ! ನೀನು ನನ್ನ ವಿಷಯದಲ್ಲಿ ಮಿತಿಮೀರಿದ ದಯೆಯನ್ನು ತೋರಿಸುತ್ತಿದ್ದೀಯೆ. ನಿಜವಾಗಿಯೂ ಇದು ಕನಸಲ್ಲವೇ? ಇಂಥಃ ಪುಣ್ಯವಂತರ ಕೈ ಹಿಡಿಯುವಷ್ಟು ನಾನು ಪುಣ್ಯವಂತಳೆ! ಇವರೊಡನೆ ಮಾತನಾಡುತ್ತಿದ್ದಷ್ಟು ಕಾಲವೂ ಬೇರೊಂದು ಲೋಕದಲ್ಲಿ ವಾಸಮಾಡುತ್ತಿದ್ದ ಹಾಗಿತ್ತು.

ರತ್ನ—(ಪ್ರವೇಶಿಸಿ) ಏನು ಕಮಲು ನಿನ್ನನ್ನು ಅಲ್ಲೆಲ್ಲಾ ಹುಡುಕುತ್ತಿದ್ದೆ, ಇದೋ ನಿನಗೆ ಪ್ರೈಜು. (ಗಡಿಯಾರ, ಸೀರೆ, ರವಿಕೆ ಇವುಗಳನ್ನು ಕೊಡುವಳು) ಇನ್ನು ಬಾಮ್ಮ ನಮ್ಮ ದಾದಿಯನ್ನು ಜೊತೆಯಲ್ಲಿ ಕಳುಹಿಸ್ತೇನೆ ಮನೆಯವರಿಗೂ ಕಾರಿನಲ್ಲಿಯೇ ಹೋಗುವಿಯಂತೆ, ಬಹಳ ಹೊತ್ತಾಯಿತು, ಮನೆಯಲ್ಲಿ ಏನಾದರೂ ತಿಳಿದುಕೊಂಡಾರು.

ಕಮಲು—ನಿಮ್ಮ ಮನೆಗೆ ಹೋಗಿದ್ದೆನೆಂದರೆ ಏನೂ ಕೇಳೋಲ್ಲ ರತ್ನ, ಈಗೇನು ಅವಸರ ಏನೂ ಭಯವಿಲ್ಲ. (ಇಬ್ಬರೂ ಹೊರಡುವರು)

]ತೆರೆ ಬೀಳುವುದು]

ಪ್ಯಾರಿಸ್ಸಿನಲ್ಲಿ ಪೊಲೀಸಿನವರು ಒಂದು ದುರಾಚಾರ ಸಂಘವನ್ನು ಪತ್ತೆಮಾಡುತ್ತಿದ್ದಾರೆ. ಆ ಸಂಘದಲ್ಲಿ ಸ್ತ್ರೀ ಸದಸ್ಯರು ಹುಡುಗಿಯರನ್ನು ಕಾಪಾಡುವ ನೆವದಿಂದ, ಪರಸ್ಥಳದಿಂದ ಬಂದ ಒಬ್ಬೊಂಟಿಗರಾದ ಯುವತಿಯರನ್ನು ಪುಸಲಾಯಿಸಿ ಉಪಾಯಾಂತರದಿಂದ ಕೆಟ್ಟಚಾಳಿನ ವೇಶ್ಯೆಯರ ಗೃಹಗಳಿಗೆ ಸಾಗಿಸುತ್ತಿರುವರು'

× ×

ಜಪಾನಿನ ಚಕ್ರವರ್ತಿಯು ಪ್ರಪಂಚದಲ್ಲೆಲ್ಲಾ ಅತಿ ಐಶ್ವರ್ಯವಂತನಾದ ಮನುಷ್ಯನು. ಆತನು ದೇವಾಂಶ ಸಂಭೂತನೆಂದೂ, ಸ್ವರ್ಗದಿಂದ ನೆಟ್ಟಗೆ ಇಳಿದು ಬಂದ ವಂಶಜನೆಂದೂ, ಆ ದೇಶೀಯರ ನಂಬಿಕೆ.

ಕಾನೂನು ಭಂಗವಲ್ಲ ಅನುಕೂಲ

ನಮ್ಮ ಸಿಟಿ ಮುನಿಸಿಪಾಲಿಟಿಯವರು ಕಾನೂನು ಉಲ್ಲಂಘನೆ ಮಾಡುವುದಕ್ಕೆ ಶುರು ಮಾಡಿದ್ದಾರೆ ಅಂತ ಹಿಂದೆ ಹೇಳಿದ್ದೆ. ಅದನ್ನು ಕೇಳಿಯೋ ಅಥವಾ ಮೊದಲೇಯೋ ಬಸ್ ಪ್ರೊಪ್ರೈಟರುಗಳು ಆ ವಿಷಯವಾಗಿ ಡೆಪ್ಟಿಕಮಿಷನರ್ ಸಾಹೇಬರಿಗೆ ಬರೆದಿದ್ದರಂತೆ. ಸಾಹೇಬರು ಮುನಿಸಿಪಲ್ ಪ್ರೆಸಿಡೆಂಟರನ್ನು ಕೇಳಿದರಂತೆ. "ಬಸ್ ಟರ್ಮಿನಸ್ ಮಾಡುವುದಕ್ಕಾಗಿ ನಾವು ತುಂಬಾ ಖರ್ಚು ಮಾಡಿದ್ದೇವೆ. ಜನಗಳಿಗೆ ಅನುಕೂಲ ಮಾಡಿದ್ದೇವೆ. ಆ ಅನುಕೂಲಕ್ಕೋಸ್ಕರ ದಿನವೊಂದಕ್ಕೆ ಬಸ್ ಒಂದಕ್ಕೆ ಒಂದಾಣೆ ತೆಗೆದುಕೊಳ್ಳುತ್ತಾ ಇದ್ದೇವೆ. ಅದು ತೆರಿಗೆಯೂ ಅಲ. ಸುಂಕಾನೂ ಅಲ್ಲ. ನ್ಯಾಯವಾಗಿಯೇ ಇದೆ" ಎಂದು ಮುನಿಸಿಪಲ್ ಪ್ರೆಸಿಡೆಂಟರು ಉತ್ತರ ಕೊಟ್ಟರಂತೆ. ಕೇಳಿದಿರಾ? ಎಷ್ಟು ಚೆನ್ನಾಗಿದೆ. ಮುನಿಸಿಪಾಲಿಟಿ ಪ್ರೆಸಿಡೆಂಟರ ಜಬಾಬು. 'ಭೇಷ್' ಅಂತಾ ಇರಬೇಕು. 'ಅನುಕೂಲ ಮಾಡಿದ್ದಕ್ಕಾಗಿ ಹಣ ವಸೂಲ್ಮಾಡಬೇಡಿ' ಅಂತ ನಾನು ಹೇಳಿಲ್ಲ. ಬಸ್ ಹೆಸರು ಹೇಳಿ ಒಂದು ಚಿಕ್ಕಾಸನ್ನು ಕೂಡ ವಸೂಲ್ಮಾಡುವ 'ರೈಟು' ಸಿಟಿ ಮುನಿಸಿಪಾಲಿಟಿಯವರಿಗೆ ಕಾನೂನು ಪ್ರಕಾರ ಇರುವುದಿಲ್ಲ. ಆದ್ದರಿಂದಲೇ ಅವರು "ಕಾನೂನ ಭಂಗ" ಮಾಡಿದರು ಅಂತ ಹೇಳಿದೆ. ಇರಲಿ. ಅನುಕೂಲತೆ ವಿಷಯ ಕೊಂಚ ನೋಡೋಣ.

× ×

'ತುಂಬಾ ಹಣ ಖರ್ಚು ಮಾಡಿ ಅನುಕೂಲ ಮಾಡಿದ್ದೇವೆ' ಅಂದರೆ ಮುನಿಸಿಪಾಲಿಟಿಯವರು. ಅನುಕೂಲ ಯಾರಿಗೆ? ಅನ್ನೋದೇ ನನ್ನ ಪ್ರಶ್ನೆ. ಬಸ್ ಪ್ರೊಪ್ರೈಟರಗಳಿಗೋ ಜನಗಳಿಗೋ? ಕಾಫಿ ಹೋಟಲಿನವರಿಗೋ? 'ತಾಖತು' ಇದ್ದರೆ ಮುನಿಸಿಪಾಲಿಟಿಯವರು ಉತ್ತರ ಕೊಡಲಿ ನೋಡೋಣ.

× ×

ಸಿಟಿಯ ಮಧ್ಯ ಸ್ಥಳದಲ್ಲಿರುವ ಬಸ್ ಸ್ಟಾಂಡನ್ನು ನಗರದ ಒಂದು ಮೂಲೆಗೆ ಹಾಕಿರುವುದರಿಂದ ಜನಗಳು ಬಿಸಿಲಿನಲ್ಲಿ ನಡಕೊಂಡು ಅಲ್ಲಿಯವರೆಗೆ ಹೋಗಬೇಕಾಗಿರುವುದು ಒಂದು ಜನಗಳಿಗೆ ಅನುಕೂಲ. ಹೊರಗಡೆ ನೋಡುವುದಕ್ಕಾಗದೇ ಹುಬ್ಬು ಗಂಟುಹಾಕಿ ಕಣ್ಣು ಸಣ್ಣದು ಮಾಡಿ ಬಿಸಿಲಿನ ಹೊಡೆತಕ್ಕೆ ಕುಳಿತುಕೊಳ್ಳುವುದು ಇನ್ನೊಂದು ಅನುಕೂಲ ಜನಗಳಿಗೆ. ನಗರದ ಮಧ್ಯ ಸ್ಥಳದಿಂದ ಹೊರಡುತ್ತಲಿದ್ದ ಬಸ್ಸುಗಳು ಸಲಸಲಕ್ಕೂ ಒಂದೆರಡು ಮೈಲುಗಳಂತೆ ಹೆಚ್ಚಾಗಿ ನಡೆದು ಪೆಟ್ರೋಲು ಹೆಚ್ಚು ಖರ್ಚು ಆಗುತ್ತಿರುವುದೊಂದು ಬಸ್ ಪ್ರೊಪ್ರೈಟರುಗಳಿಗೆ ಅನುಕೂಲ. ಸಾಲದಿದ್ದುದಕ್ಕೆ ಇದೆಲ್ಲಾ ಅನುಕೂಲಗಳನ್ನು ಕಲ್ಪಿಸಿದುದಕ್ಕಾಗಿ ದಿನಕ್ಕೆ ಒಂದಾಣೆಯಂತೆ ದಂಡ ಕೊಡುತ್ತಿರುವುದು ಮತ್ತೊಂದು ಅನುಕೂಲ. ಕಾಫಿ ಹೋಟಲ್ ಬಾಡಿಗೆ, ಪೆಟ್ರೋಲ್ ಬ್ಯಾಂಕುಗಳ ಬಾಡಿಗೆ. ಬಸ್ಸುಗಳ ಬಾಡಿಗೆ ಎಂದು ಮುಂತಾಗಿ ಹಲವು ಬಾಡಿಗೆಗಳನ್ನೆಲ್ಲಾ ವಸೂಲು ಮಾಡಿ ಹಣಗಳಿಸುತ್ತಿರುವುದೊಂದು ಅನುಕೂಲ ನಮ್ಮ ಸಿಟಿ ಮುನಿಸಿಪಾಲಿಟಿಯವರಿಗೆ. ಇದ್ದ ಒಂದಿಷ್ಟು ಜಾಗದಲ್ಲಿ ಕುರ್ಚಿ ಮೇಜುಗಳನ್ನಿಟ್ಟು ಬಂದ ಅತಿಥಿಗಳಿಗೆ ಕೂಡ್ರಿಸಿ ತಿಂಡಿತೀರ್ಥಗಳನ್ನು ಕೊಟ್ಟು ಸಂಭಾವನೆ ಹೊಂದುವ ಅನುಕೂಲ ಹೋಟಲಿನವರಿಗೆ. ಇಷ್ಟೆಲ್ಲಾ ಅನುಕೂಲಗಳಿರುವಾಗ 'ಇಲ್ಲ' ಎಂದು ಹೇಳುವ ಧೈರ್ಯ ಯಾರಿಗ ಇದೆ [illegible]ೇಳಿ? ಅವರೆಲ್ಲಾ ಹೀಗೆ ಮಾಡ್ತಾ ಇರೋದರಿಂದ ಇದನ್ನು ಹೇಳೋದಕ್ಕೆ ನನಗೊಂದು ಅನುಕೂಲ ಅನ್ನಿ.

× ×

ನಮ್ಮ ಮುನಿಸಿಪಾಲಿಟಿಯವರಿಗೆ ಇನ್ನೊಂದು 'ಸಜ್ಜೆಷನ' ಕೊಡಬೇಕು ಅಂತ ಇದೇನೆ. ಏನೂಂತೀರೋ? ನಮ್ಮ ಮುನಿಸಿಪಾಲಿಟಿಯವರು ತುಂಬಾ ಹಣ ಖರ್ಚು ಮಾಡಿ ಒಂದು ಆಫೀಸನ್ನು ಕಟ್ಟಿಸಿರುತ್ತಾರೆ. ಕಟ್ಟಡ ಸೊಗಸಾಗಿದೆ. ಬೆಳಕು ಗಾಳಿ ತುಂಬಾ ಇದೆ. ಅಲ್ಲಿ ಯಾರಾದರೂ ಪ್ರೆಸಿಡೆಂಟರ ಹತ್ತಿರ ಮಾತನಾಡುವುದಕ್ಕಾಗಿ ಹೋದವರು ಕೂತುಕೊಳ್ಳುವುದಕ್ಕೆ ಅನುಕೂಲವಾಗುವಹಾಗೆ ಒಳ್ಳೆಯ ಕುರ್ಚಿಗಳನ್ನಿಟ್ಟಿದ್ದಾರೆ. ಏರ್ಪಾಡು ಬಹಳ ಚೆನ್ನಾಗಿದೆ. ತುಂಬಾ ಅನುಕೂಲ. ನಾನು ಹೇಳೋದು—ಪ್ರೆಸಿಡೆಂಟರನ್ನು ಕಾಣೋಕ್ಕೆ ಹೋದವರು ಆ ಕುರ್ಚಿಗಳ ಮೇಲೆ ಹಾಯಾಗಿ ಕುಳಿತಿರುತ್ತಾರೆ. ತುಂಬಾ ಅನುಕೂಲವಾಗಿ ಮತ್ತು ಮನಸ್ಸು ನೆಮ್ಮದಿಯಾಗಿರುತ್ತೆ. ಇಷ್ಟೆಲ್ಲಾ ಅನುಕೂಲವಿರುವುದರಿಂದ, ಅಲ್ಲಿಗೆ ಬಂದವರಿಂದೆಲ್ಲಾ ಒಂದೊಂದಾಣೆಯಂತೆ ವಸೂಲ್ಮಾಡುತ್ತೆ, ಒಂದರೆ ತುಂಬಾ ಹಣ ಉತ್ಪತ್ತಿಯಾಗುವುದಿಲ್ಲವೇ? ಅದೇನೂ ಕಾನೂನಿಗೆ ವಿರೋಧವಿಲ್ಲ. ಜನಗಳ ಅನುಕೂಲತೆಗೆ ತಾನೇ ಮಾಡೋದು? ಇನ್ನೂ ಒಂದು ವಿಚಾರ. ನಮ್ಮ ಸಿಟಿಯಲ್ಲಿ ಎಷ್ಟೋ ಪಾರ್ಕುಗಳು ಇವೆ. ಪ್ರತಿ ದಿನವೂ ತುಂಬಾ ಜನಗಳು ಅಲ್ಲಿ ಬಂದು ಕೂತುಕೊಳ್ಳುತ್ತಾರೆ. ಅವರೆಲ್ಲಾ ಇಸಂಬಾದಕ್ಕೆ ಮೂರು ಕಾಸಿನಂತೆ ಕೊಡಬೇಕೂಂತ ಮಾಡಿದರೂನು ತುಂಬಾ ಹಣ ಉತ್ಪತ್ತಿಯಾಗುತ್ತದೆ. ಎಷ್ಟೋ ಅನುಕೂಲ.

× ×

ಇನ್ನೂ ಎಷ್ಟೋ ಅನುಕೂಲಗಳಿವೆ. ತುಂಬಾ ಹಣ ಉತ್ಪತ್ತಿ ಮಾಡಬಹುದು. ಅಂದರೆ, ನಮ್ಮ ಮುನಿಸಿಪಾಲಿಟಿಯವರು ಕೌನ್ಸಿಲರುಗಳು ಮನಸ್ಸು ಮಾಡಬೇಕು. ಎಲ್ಲಾ ಅನುಕೂಲವಾಗುತ್ತೆ.

"ಮಲ್ಲ"

ಯುವಕರಿಗೆ

(ಲೇಖಕರು__ ವ|| ಬಿ. ಎಸ್. ಇಂದ್ರನ್,)

ನಮ್ಮ ದೇಶದ ತರುಣ ತರುಣಿಯರಲ್ಲಿ ಉತ್ಸಾಹಕ್ಕೇನೂ ಕಡಿಮೆಯಿಲ್ಲ. ಅವರಿಗೆ ದೇಶಭಕ್ತಿ ಇದೆ. ಜನಾಂಗದಲ್ಲಿ ತಮ್ಮ ಕಾರ್ಯಭಾರವು ಸೇರಲಿ ಎಂಬ ಕುತೂಹಲವೂ ಇದೆ. ನಾವು ಯಾವ ಕಾರ್ಯವನ್ನು ಮಾಡಿ ತಮ್ಮ ಜನ್ಮವನ್ನು ಸಾರ್ಥಕಗೊಳಿಸೋಣ? ಎಂದು ಅವರೆಲ್ಲರೂ ತವಕಪಡುತ್ತಿದ್ದಾರೆ.

ಅಲ್ಲಲ್ಲಿ ಯುವಕ ಸಂಘಗಳು, ತರುಣ ತಂಡಗಳು ಏರ್ಪಡುತ್ತಿವೆ. ಅವುಗಳಲ್ಲಿ ನಮ್ಮ ದೇಶದ ಉಡುಪುಗಳ ವಿಚಾರವಾಗಿ ಚರ್ಚೆಗಳಾಗುತ್ತಿವೆ. ಭಾಷೆ, ಉಡುಪು, ಆಹಾರ ವಿಹಾರ, ಸಮಾಜ ಸಂಸ್ಕಾರ, ವಿದ್ಯಾರ್ಜನೆ ಇವುಗಳನ್ನು ಕುರಿತು ವಾದವಿವಾದಗಳು ನಡೆಯುತ್ತಿವೆ. ಗೊತ್ತುವಳಿಗಳು (ಠರಾವುಗಳು, ತೀರ್ಮಾನಗಳು) ಆಗುತ್ತಿವೆ; ವರ್ತಮಾನ ಪತ್ರಿಕೆಗಳಲ್ಲಿ ಲೇಖನಗಳು ಬರುತ್ತಿವೆ. ಮಬ್ಬು ಹರಿಯಿತು, ಕಣ್ಣೊರಸಿಕೊಂಡು ನಮ್ಮ ದೇಶವು ಮೇಲಕ್ಕೆ ಎದ್ದಿತು! ಎಂದು ಎಲ್ಲರೂ ಎಂದುಕೊಳ್ಳುತ್ತಿದ್ದಾರೆ.

ಆದರೆ ನಿಜವೇನು? ನಮ್ಮ ದೇಶವಿನ್ನೂ ಗೊರಕೆಯಲ್ಲಿಯೇ ಇದೆ. ನನ್ನ ಸ್ನೇಹಿತನೊಬ್ಬನು ನೆನ್ನೆ ದಿನ ನನ್ನ ಪಕ್ಕದಲ್ಲಿ ಮಲಗಿಕೊಂಡಿದ್ದನು. ಬೆಳಗಿನ ಝಾವದಲ್ಲಿ ನಾನು ಎದ್ದ ಮೇಲೆಯೂ, ಮನೆಯವರೆಲ್ಲರೂ ಎದ್ದ ಮೇಲೂ ಗೊರಕೆ ಹೊಡೆಯುತ್ತಲೇಯಿದ್ದನು. ಒಂದು ಸಲ ಅವನು ಕೈಕಾಲು ಆಡಿಸಿದನು; ಇನ್ನೇನು ಅವನೂ ಎದ್ದನು – ಎಂದು ನಾವು ಅಂದುಕೊಂಡೆವು. ಆದರೆ ನಿಜವೇನು ಬಲ್ಲಿರಾ ಅವನು ಬಲಮಗ್ಗುಲಿನಿಂದ ಎಡಮಗ್ಗುಲಿಗೆ ಹೊರಳಿ ಮಲಗಿಕೊಂಡನು.

ನಮ್ಮ ಚಟುವಟಿಕೆಗಳು ಈ ಗುಂಪಿಗೆ ಸೇರಿದವೇ? ನಾವಿನ್ನೂ ಪೂರ್ಣವಾಗಿ ಎಚ್ಚತ್ತಿಲ್ಲ. ಕಣ್ಣುಗಳನ್ನು ಒರಸಿಕೊಂಡು ಮೇಲಕ್ಕೆ ಎದ್ದು ನಿಂತಿಲ್ಲ; ಹಿಂದೆ ಸೋಮಾರಿಗಳಾಗಿ ಕೂತಲ್ಲಿ ಕೂತಿರುತ್ತಿದ್ದೆವು. ಈಗ ನಿಂತಲ್ಲಿ ನಿಲ್ಲದೆ ಪಾಶ್ಚಾತ್ಯ ಪತ್ರಿಕೆಗಳಲ್ಲಿ ಕಂಡುಬರುವ ಕೆಲವು ಸುದ್ದಿಗಳನ್ನೋದಿ ಅತ್ತಿತ್ತ ಹರಿದಾಡುತ್ತಿರುವೆವು. ಸಂಘಗಳನ್ನು ಏರ್ಪಡಿಸುವುದು, ತೀರ್ಮಾನಗಳನ್ನು ಪ್ರಸಿದ್ಧಗೊಳಿಸುವುದು, ಉಪನ್ಯಾಸಗಳನ್ನು ಒಂದಿಷ್ಟು ಮಾಡುವುದು, ಪ್ರಾಚೀನ ಸಂಪ್ರದಾಯಗಳನ್ನು ಒಂದಿಷ್ಟು ಹಳಿಯುವುದು, ಸ್ವೇಚ್ಛೆಯಿಂದ ತಿರುಗುವುದು, ಇವೇ ಎಡಮಗ್ಗುಲಾದ ಚಿಹ್ನಗಳೇ ಹೊರತು ಎಚ್ಚತ್ತ ಚಿಹ್ನೆಗಳಲ್ಲ.

ಯುವಕರಿರಾ, ಏಳಿ, ಎಚ್ಚರಗೊಳ್ಳಿ. ನಿಮ್ಮಿಂದ ನಮ್ಮ ಜನರ ಮೋಕ್ಷವಾಗಬೇಕಾಗಿದೆ. ಬರೀ ಚಳವಳಿಗಳು ಪ್ರದರ್ಶನಗಳೂ ಸಾಲದು. ಎದ್ದೆತ್ತಿನ ಬಾಲ ಹಿಡಿದಂತೆ ಆಯಾ ಕಾಲಕ್ಕೆ ಪತ್ರಿಕೆಗಳು ಕೊಂಡಾಡುವ ಜನ

ವರ್ತಮಾನಗಳು

ಕಲ್ಕತ್ತಾ ಕ್ಷಯರೋಗದ ಆಸ್ಪತ್ರೆಗೆ ತನ್ನ ಹೆಸರನ್ನು ತಿಳಿಸದೆ ಒಬ್ಬರು ಎರಡು ಸಾವಿರ ರೂಪಾಯಿಗಳನ್ನು ಕಳುಹಿಸಿ ಶ್ರೀ ಗಾಂಧಿಯವರ ಹೆಸರಿನಲ್ಲಿ ಇಬ್ಬರು ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನಡೆಸಲು ಏರ್ಪಾಡು ಮಾಡಿರುವರು.

ಜರ್ಮನಿಯಲ್ಲಿ ಅನೇಕರು ಈಚೆಗೆ ವಿರಾಮವಿಲ್ಲದೆ ಸೈನಿಕ ಶಿಕ್ಷೆಯನ್ನು ಹೊಂದುತ್ತಿರುವದಂದ ಕಳೆದ ವರ್ಷ ಹೃದಯ ವ್ಯಾಧಿಯಿಂದ 1,29,257 ಮಂದಿ ಮರಣ ಹೊಂದಿದರು.

ಇಂಗ್ಲೆಂಡು ಸೈನ್ಯದ ಖರ್ಚಿಗಾಗಿ ವರ್ಷಂಪ್ರತಿ 260 ಮಿಲಿಯ ಪೌಂಡುಗಳನ್ನು ಖರ್ಚು ಮಾಡುತ್ತಿದೆ. ಜರ್ಮನಿಯಾದರೋ 1,000 ಮಿಲಿಯ ಪೌಂಡುಗಳನ್ನು ಖರ್ಚು ಮಾಡುತ್ತಿದೆ. ಸೈನ್ಯಕ್ಕಾಗಿ, ಯುದ್ಧ ವಿಮಾನ ನಾವೆಗಳಿಗಾಗಿ, ವಿಷವಾಯು ಬಾಂಬುಗಳಿಗಾಗಿ ಖರ್ಚುಮಾಡಲು ಒಬ್ಬರನ್ನೊಬ್ಬರು ಮೀರುತ್ತಿರುವರಾಗಲಿ ಶಾಂತತೆಯು ನೆಲಗೊಳ್ಳಲು, ಜನರು ಸುಖವಾಗಿರುವಂತೆ ಮಾಡಲು, ನಿರುದ್ಯೋಗವು ನಿರ್ಮೂಲವಾಗಲು ಹಣ ವ್ಯಯಮಾಡುವದೆಂದರೆ ಹಿಂಜರಿಯುವಿಕೆಯೇ ಕಾಣಬರುತ್ತಿದೆ.

ತಿರುವಾಂಕೂರು ಅಸೆಂಬ್ಲಿಯಲ್ಲಿ ದಿವಾನ್ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರು ಮಾಡಿದ ಉಪನ್ಯಾಸದಿಂದ ಸಂಸ್ಥಾನದ ಪ್ರಜೆಗಳಿಗೆ ಪೂರ್ತಿಯಾಗಿ ಎಲ್ಲಾ ಹಕ್ಕುಗಳನ್ನು ಕೊಡುವದರಿಂದ ಇಂಗ್ಲೆಂಡು ಸರ್ಕಾರದೊಂದಿಗೆ ಮಾಡಿಕೊಂಡಿರುವ ಸಂಧಿ ಏರ್ಪಾಡುಗಳಿಗೆ ತೊಂದರೆಯಾಗುವದೆಂದು ತಿಳಿಸಿದರು. ಇಂಥಾ ಸಂಸ್ಥಾನಗಳನ್ನು ಫೆಡರಲ್ ವಿಧಾನದಲ್ಲಿ ಸೇರಿಸುವದರಿಂದ ಭಾರತೀಯರ ಅಭಿವೃದ್ಧಿಗೆ ಆತಂಕಗಳುಂಟಾಗುವವು.

ಡಾ|| ರಾಜನ್‌ರವರು ಪ್ರಾಚೀನ ಭಾರತೀಯ ವ್ಯಾಯಾಮ ಪದ್ಧತಿಯೇ ಪಾಶ್ಚಾತ್ಯ ವ್ಯಾಯಾಮಗಳಿಗಿಂತ ಉತ್ತಮವಾದುದೆಂದೂ, ಸುಲಭವಾದುದೆಂದೂ ತಿಳಿಸಿರುವರು.

ಸೇಲಂ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧವು ಜಾರಿಯಲ್ಲಿರುವದರಿಂದ ಗ್ರಾಮಾದಿಗಳಲ್ಲಿ ಅನೇಕರು ಸಾಲಗಾರರ ಬಾಧೆಯಿಲ್ಲದೆ ಸುಖವಾಗಿರುವರು. ಸರ್ವನಾಶಕರವಾದ ಈ ಕುಡಿತದ ಹಾವಳಿಯು ದೇಶಕ್ಕೆ ಬಹಳ ಅನರ್ಥಕರವಾದುದು.

ನಾಯಕರು ಹಾಡುವ ರಾಗಕ್ಕೆ ತಾಳ ಹಾಕಿದರೆ ಸಾಲದು ಭರತಖಂಡದ ಜೀವನದ ಜೀವಾಳವನ್ನು ಕಂಡುಕೊಳ್ಳಿರಿ ಅದು ಜೀವರಿಗೆಲ್ಲಾ ಜೀವನವು ಅದು. ನಿಮ್ಮಲ್ಲಿ ಉಜ್ಜೀವನವಾಗಲೀ! ಈ ಮೂಲಕ ನಿಮ್ಮ ನಮ್ಮ ಲೋಕವು ಉದ್ಧಾರವಾಗಲಿ.

ಸ್ಪರ್ಧೆಗಳಿಗೆ ಸಲಹೆಗಳು

Suggestions to Competitions

ಚಿತ್ರಶಾಲಾ ೪೪

– ಎಡದಿಂದ ಬಲಕ್ಕೆ

1 ವೈದ್ಯಶಾಸ್ತ್ರ 3 ಸತ್ಯ, ಪತ್ಯ 4 ವಿರೋಧಿಸು, ನಿರೋಧಿಸು 7 ರಾಘವಾಂಕ 9 ಕಮರಿ, ಕಬರಿ 10 ಕಸ್ತೂರಿ 11 ಕಾಸು 12 ಲಾಭ 15 ತರಕಾರಿ 20 ಚಿತ್ರಶಾಲಾ 21 ಅಭಿಮನ್ಯು 22 ಉಪಚಯ 23 ಶಿಲಾರೂಪ 24 ಪತಿತರು 27 ನಡಿ, ನುಡಿ ಒಡಿ 28 ಚಿತ್ರ, ಚಿನ್ನ 80 ಸುಕವಿ 32 ಸಂಹಾರ 33 ರವಿವಾರ 34 ತಿಮಿಂಗಿಲ 35 ಪತಿ 36 ವರ್ಣವಾದ, ವರ್ಣಭೇದ.

ಮೇಲಿನಿಂದ ಕೆಳಕ್ಕೆ

1 ವೈದಿಕರು, ವೈಣಿಕರು 2 ಶಾರ್ವರಿ 5 ರೋಹಿಕ 6 ಸಂಧಾರಿಸು 7 ರಾವಿಸುತ 8 ಕಮಲಾರಿ 13 ಚಿತ್ರಪಟ 14 ನಿಶಾಚರ 16 ರಸವತಿ 17 ಕಾಲಚಿತ್ತ, ಕಾರ್ಯಚಿತ್ತ 18 ಅಭಿಲಾಷೆ 19 ಕಾಮರೂಪಿ 24 ಪಡಿಯರ 25 ರುಚಿಕರ 26 ವಸುಮತಿ 29 ಭಾರವಾದ 31 ವಿರಾಗಿ, ವಿಯೋಗಿ 32 ಸಂಪೂರ್ಣ

ಆಯುರ್ವೇದ ಕಾಲೇಜಿನ ವಾರ್ಷಿಕೋತ್ಸವ

ಇದು ಕಳೆದ 19 ನೇ ತಾರೀಖಿನ ದಿವಸ ಅತಿ ವಿಜೃಂಭಣೆಯಿಂದ ಕಾಲೇಜು ಕಟ್ಟಡದಲ್ಲಿ ನೆರವೇರಿಸಲಾಯಿತು. ಮುಜರಾಯಿ ಕಮಿಷನರ್ ಮತ್ತು ಕಾಲೇಜು ಕಮಿಟಿ ಪ್ರೆಸಿಡೆಂಟ್ ಮ|| ಕೆ. ವಿ. ಅನಂತರಾಮನ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾರ್ಥನೆ ಮತ್ತು ಸಂಗೀತ ನಡೆದನಂತರ, ಕಾಲೇಜು ಪ್ರಿನ್ಸಿಪಾಲರಾದ ಡಾ|| ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು ವರದಿಯನ್ನು ಓದಿದರು. ಕಾಲೇಜಿನ ಹಿಂದಿನ ಮತ್ತು ತಾತ್ಕಾಲಿಕ ಸ್ಥಿತಿಗತಿಗಳ ವರ್ಣನೆ ಮಾತ್ರವಲ್ಲದೆ ಆಯುರ್ವೇದದ ಅಭಿವೃದ್ಧಿಗೆ ಮಾಡಬಹುದಾದ ಅನೇಕ ಅಮೋಘವಾದ ವಿಷಯಗಳನ್ನು ಒಳಗೊಂಡಿದ್ದಿತು. ಆಟಪಾಟಗಳಲ್ಲಿ ವಿಜಯಿಗಳಾದ ಹುಡುಗರಿಗೆ ಬಹುಮಾನ ಹಂಚಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ನಡೆದು ಸಭೆಯು ಬರಖಾಸ್ತಾಯಿತು.



ರೂ. 350 ನಂ .21 ರೂ. 150

ಮಹಿಳೆಯರಿಗಾಗಿ ೫೦ ರೂಪಾಯಿನ ಸ್ಪೆಷಲ್ ಬಹುಮಾನಗಳು.

ಪ್ರವೇಶ ಧನವು ಪ್ರತಿ ಉತ್ತರಕ್ಕೆ ೮ ಆಣೆಗಳು. ಆದರೆ ಒಬ್ಬರೇ ಎರಡು ಉತ್ತರಗಳನ್ನು ಕಳುಹಿಸಿದರೆ ಮತ್ತೆ ಎರಡು ಉತ್ತರಗಳನ್ನು ಉಚಿತವಾಗಿ ಕಳುಹಿಸಬಹುದು. ಉತ್ತರಗಳನ್ನು ಈ ಕೆಳಗಿನ ಕೂಪನ್ನಿನಲ್ಲಾಗಲಿ, ಬಿಳಿಯ ಕಾಗದದ ಮೇಲೆಯಾಗಲಿ ಚಿತ್ತಿಲ್ಲದೆ ಬರೆದು ಕಳುಹಿಸಬೇಕು.

ಉತ್ತರಗಳು ತಲುಪಬೇಕಾದ ಕಡೆಯ ತಾರೀಖು 8 ನೇ ಮಾರ್ಚಿ 1938 ಸರಿಯಾದ ಉತ್ತರವನ್ನು ತಾ|| 17 ನೇ ಮಾರ್ಚಿ ತಾಯಿನಾಡು, ಲೋಕಮತ ಈ ಪೇಪರುಗಳನ್ನು ನೋಡಿ. ಉತ್ತರಗಳು ಮತ್ತು ಬಹುಮಾನವನ್ನು ಪಡೆದವರ ಹೆಸರುಗಳ ಚೀಟಿಯು ಬೇಕಾದಲ್ಲಿ ಅರ್ಧಾಣೆಯ ಸ್ಟಾಂಪಿನೊಡನೆ ಬರೆಯಬೇಕು.

1 ತ	2 ನು	ಮ	ನ	3 ಧ	4 ನ	■	5
		■	■	6		7 ತ	
ರ	■	8	9 ಮ		■		■
■	10	ರಾ		ಯ	■		11 ಮಿ
■	■	12	ಷ್ಮ	■	13	■	
14	15	ಲ	■	16	ಗ	ಣಿ	
17		■	18 ನಾ		■	■	
	■	19		ಗೆ	■	20	ದ

ಕೂಪನ್ ನಂ...................

ಹೆಸರು...

ವಿಳಾಸ...

ಪೋಸ್ಟಲ್ ಯಾ ಮನಿಯಾರ್ಡರ್ ನಂ........

ಎಡದಿಂದ ಬಲಕ್ಕೆ

(1) ಈಗಿನ ಅನೇಕ ಕಾಂಗ್ರೆಸ್ ನಾಯಕರೆಲ್ಲಾ ತಮ್ಮ.........ಗಳನ್ನೆಲ್ಲಾ ಸ್ವರಾಜ್ಯ ಹೋರಾಟಕ್ಕೆ ಅರ್ಪಿಸುತ್ತಿದ್ದಾರೆ. (6) ಬಾಂಧವ, ಬಂಧುತ್ವ. (8) ಪುತ್ರ, ಮಗ. (10) ಮಿಶ್ರಿತ "ರಾಮಾಯಣ" (12) ಭೂಮಿ. (14) ಜೊತೆಯಾಗಿರುವ, ಸೇರಿರುವ (16) ಆಕಾಶದಲ್ಲಿ ನಕ್ಷತ್ರಗಳು ಇಷ್ಟಿವೆ. (17) ನಲಿದು. (18) ದೇಶ, ಭೂಮಿ, ಪ್ರದೇಶ. (19) ಇದರ ಬೆಲೆ ಜಾಸ್ತಿಯಾದರೆ ಬಡವರಿಗೆ ಅತಿ ಕಷ್ಟ. (20) ಪಿತ್ರಾರ್ಜಿತ ಆಸ್ತಿಯ ಭಾಗದಲ್ಲಿ ಇದು ಉಂಟಾದರೆ ಕೋರ್ಟಿಗೆ ಹತ್ತದೆ ತೀರುವಂತಿಲ್ಲ.

ಮೇಲಿಂದ ಕೆಳಕ್ಕೆ

(1) ಭಾರವಿಲ್ಲದ ಲೋಹ. (2) ಮಾತು, ಶಬ್ದ. (3) ಅರ್ಜುನನಿಗೆ ಈ ಹೆಸರೂ ಇದೆ. (4) ಪಾತ್ರದೇರ ಕುಣಿಯುವವ. (5).........ವಂತನಾದ ಮನುಷ್ಯನಿಗೆ ಜಗಳವು ಸಂಭವಿಸಿದರೂ ಅದರಲ್ಲಿ ಪಾತ್ರವಹಿಸುವುದು ಅಪೂರ್ವ. (7) ಸೋಂಕು, ತಾಕು (8) ವಿವಿಧ, ಅನೇಕವಿಧ (9) ಬಾಲೇ ಸಖಿಗಳ ಒಡ.........ಆಗಿಯೂ ಕೋಮಲವಾಗಿಯೂ ಇಪ್ಪವನಲ್ಲವೆ? (11) ಬೆರಕೆಯಾದ (13) ಪ್ರತಿಯೊಂದು ಸ್ವತಂತ್ರ ರಾಷ್ಟ್ರವೂ ತನಗೆ ಈ ಪ್ರಪಂಚದಲ್ಲಿ ಹೆಚ್ಚಿನ......ವನ್ನು ಸೇರಿಸಿಕೊಳ್ಳಬೇಕೆಂದು ಯುದ್ಧಕಾಲದಲ್ಲಿ ಉಪಯೋಗಿಸಲು ಗುಟ್ಟಾಗಿ ಶಸ್ತ್ರಾಸ್ತ್ರಗಳನ್ನು ಶೇಖರಿಸಿಕೊಳ್ಳುತ್ತಿರುವುವು (14) "ಅನುಜ" ರಸಾಭಾಸವಾಗದೆ (15) "ಪ್ರತಿಯೊಂದು ಇದು ನಾಶವಾಗತಕ್ಕದ್ದಲ್ಲ" ಎಂದು ವೈಜ್ಞಾನಿಕರು ಹೇಳುವರು (Matter is Indestructible) (16) ಹಬ್ಬದ ದಿನ ಇದು ಕೆಟ್ಟು ಹೋದರೆ ಮನಸ್ಸಿಗೆ ಬಹಳ ಅಸಮಾಧಾನವಾಗುವುದು (18) ಇದು ಸರಿಯಾಗಿದ್ದರೆ ಸರಿ! ಮನುಷ್ಯನಿಗೆ ವಾರಸು ಇಲ್ಲದಿದ್ದರೆ ಅವನು ಬದುಕುವುದು ಕಷ್ಟ.

ಬೆಂಗಳೂರು ಬಸವನಗುಡಿಯಲ್ಲಿ ನಮ್ಮ ಏಜೆಂಟರಾದ ಮ|| ವ್ಯಾಕರಣ ನರಸಿಂಹಮೂರ್ತಿ C/o ವಿ. ಎಸ್. ಬ್ರದರ್ಸ್, ಬುಕ್ ಬೈಂಡರ್ಸ್ ಎಂಡ್ ಬುಕ್ ಸೆಲ್ಲರ್ಸ್, ಗಾಂಧಿ ಬಜಾರ್, ಬಸವನಗುಡಿ, ಇವರಲ್ಲಿ ಎಂಟ್ರಿ ನೋಟುಗಳನ್ನೂ ಮತ್ತು ಕೂಪನ್ನುಗಳನ್ನೂ ಕೊಟ್ಟು ರಸೀತಿ ಪಡೆಯಬಹುದು.

ಮೈಸೂರಿನಲ್ಲಿ ಭಾಗ ವಹಿಸುವವರು ಮ|| ಎಸ್. ಆರ್. ಶಾಸ್ತ್ರಿ, ಬಿ.ಎ., ಪ್ರೊಪ್ರೈಟರ್, ಭಾರತ್ ಕೂಲ್ ಡ್ರಿಂಕ್ಸ್ ಫ್ಯಾಕ್ಟರಿ ಚಾಮರಾಜಪುರಂ ಮೈಸೂರು ಇವರಲ್ಲಿ ಎಂಟ್ರಿ ನೋಟುಗಳನ್ನೂ ಮತ್ತು ಕೂಪನ್ನುಗಳನ್ನೂ ಕೊಟ್ಟು ರಶೀತಿ ಪಡೆಯಬಹುದು.

ನಮ್ಮ ಆಫೀಸಿನಲ್ಲಿ ಪ್ರತಿದಿನವೂ ಬೆಳಗ್ಗೆ 9 ಗಂಟೆಯಿಂದ 11 ಗಂಟೆವರೆಗೂ, ಮಧ್ಯಾಹ್ನ 3 ಗಂಟೆಯಿಂದ ೬ ರವರೆಗೆ ಕೂಪನ್ನುಗಳನ್ನು ಪಾವತಿಮಾಡಬಹುದು

ನಿಬಂಧನೆಗಳು ಮಾಮೂಲಿನಂತೆಯೇ. ಸ್ಪರ್ಧೆಯ ವಿಷಯದಲ್ಲಿ ಮ್ಯಾನೇಜರ ತೀರ್ಪೇ ಕಡೆಯದು. ಮತ್ತು ಎಲ್ಲರೂ ಅದಕ್ಕೆ ಒಳಪಡಬೇಕು. ನಮ್ಮ ಸ್ಪರ್ಧೆಗಳ ನಿಬಂಧನೆಗಳನ್ನು ತಿಳಿಯಲು ಇಷ್ಟಪಡುವವರು ನಮ್ಮ ಆಫೀಸಿನಿಂದ ಪಡೆಯಬಹುದು.

ಮ್ಯಾನೇಜರ್—ನವೀನ ಸುಲಭ ಸ್ಪರ್ಧೆಗಳು,
'ರಂಗವಿಲಾಸ' ಮೆಜೆಸ್ಟಿಕ್ ಸಿನಿಮಾ ಎದುರು, ಬೆಂಗಳೂರು ಸಿಟಿ

SATYAVADI

Peoples' Pice Paper

Founded 1917
MYSORE

Popular Karnatik Weekly.

Vaidyaratnam P. S. VARIER'S

Arya Vaidya Sala, Kottakkal

Branches – Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma, Ceylon, Malaya and other colonies alone stands for its unequalled reliability. All sorts of ayurvedic preparations prepared under scientific methods are always kept here in stock for sale. Dhara, Navarakkizhi, Pizhichil and other special treatments of Malabar are conducted under Vaidyaratnam's own supervision. Treatment through correspondance a speciality. Vaidyaratnam visits his Calicut branch on almost every 1 st and 3 rd Sundays and Palghat branch on 2 nd and 4 th Sundays.

Chyavanapras Leham

From the time of ancient sages this medicine is reknowned for its unequalled efficacy in retaining youthfulness. It is so termed because Sage Chyavana was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound Rs 4.

For further particulars and free catologues please apply to—

The Manager, Arya Vaidyasala, KOTTAKAL (S. Malabar)

ಹಿಂದೂಸ್ಥಾನಕ್ಕೆ ಅಚ್ಚುಮೆಚ್ಚಿಗೆಯಾದ ಸ್ನಾನದ ಸಾಬೂನು

Mysore Sandal Soap
Mysore Soap Factory
Bangalore

ಸುವಾಸನೆಯಿಂದ ಕೂಡಿ ಉಲ್ಲಾಸ ಜನಕವಾಗಿರುವ ಈ ಸಾಬೂನು ಸಾವಿರಾರು ಜನರಿಗೆ ಅಚ್ಚುಮೆಚ್ಚಾಗಿದೆ.

ನಿಮಗೆ ಏಕಾಗದು ?

ಮೈಸೂರು ಗಂಧದ ಸಾಬೂನು

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಗವರ್ನ್ಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು

Know Your
Future!

Have you any perplexing problems in life ?

If so, send any five questions in a sealed cover about your future health wealth, marriage, love, finance, litigation, studies, employment, business or anything. Prof. Chinna the mesmerist will send you simple, direct, accurate, helpful hints, together with your sealed cover intact for Rs 1/4.

Don't miss to-morrow's helpful hints Mail your letter to-day

Prof. CHINNA, M.I.B.M (U.S.A)
MESMERIST
Collectrate P. O., Cocanada
(East Godavari Dt.)

Wanted

ನಮ್ಮಲ್ಲಿ ತಯಾರಾಗುವ ಸುವಾಸಿನಿ ಎಂಬ ಊದುಬತ್ತಿಯ ಹಾಗೆ ಹೊಗೆ ಕೊಡುವ ಶ್ರೀಗಂಧದ ಬಿಲ್ಲೆಗಳಿರುವ ಪ್ಯಾಕೆಟ್ಟುಗಳಿಗೆ ಅಖಿಲಕರ್ನಾಟಕದಲ್ಲಿಯೂ ಡಿಸ್ಟ್ರಿಬ್ಯೂಟರೂ ಏಜೆಂಟರೂ ಬೇಕಾಗಿದೆ. 48 ಬಿಲ್ಲೆಗಳಿರುವ ಒಂದು ಪ್ಯಾಕೆಟ್ಟಿನ ಬೆಲೆ ಎರಡಾಣೆ ಮಾತ್ರ. ಮಾದರಿ ಪ್ಯಾಕೆಟ್ಟು ಬೇಕಾದಲ್ಲಿ ನಾಲ್ಕಾಣೆ ಸ್ಟಾಂಪು ಕಳಿಹಿಸಿದಲ್ಲಿ ರವಾನಿಸಲಾಗುತ್ತೆ.

ಕೂಡಲೇ ಒಂದುಪ್ಯಾಕೆಟನ್ನು ತರಸಿಕೊಂಡು ನೋಡಿರಿ.

ವಿಳಾಸ— **ಪದಕಿ ಕೃಷ್ಣಮೂರ್ತಿ,**
ಚಾಮುಂಡಿ ಬಡಾವಣೆ, ಮೈಸೂರು.

ಚಿತ್ರದುರ್ಗದಲ್ಲಿ 'ಸತ್ಯವಾದಿ' ಏಜೆಂಟರು

ಮ॥ ವಿ. ಜಿ. ರಾಮಲಿಂಗ ಮೊದಲಿಯಾರ್
ಎಂಡ್ ಬ್ರದರ್ಸ್, ಸಂತೇಬಾಗಿಲ ಹತ್ತಿರ
ಚಿಕ್ಕಪೇಟೆ, ಚಿತ್ರದುರ್ಗ

Edited, printed & published by M.S.Krishna Rao, at the Satyavadi Press, Satyavadi Builds., Chamaraj Agrahar, Mysore